# ಅಪರಂಜಿ

ತಿಳಿನಗೆಯ ಕಾರಂಜಿ

ಜುಲೈ - 2015

ಅಂದು ವಿದೇಶಿ ವಸ್ತುಗಳು ಬೆಂಕಿಗೆ...
ಇಂದು 'ಮ್ಯಾಗಿ' ಬೆಂಕಿಗೆ...





# ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 32
ಸಂಚಿಕೆ - 10
ಜುಲೈ - 2015



**ಸಂಪಾದಕ ಮಂಡಳಿ**

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**
ಶ್ರೀ ಎಂ. ಶಿವಕುಮಾರ್

**ಟ್ರಸ್ಟಿಗಳು**
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ವಿ.ಆರ್. ನಾಥ್
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್

**ಗೌರವ ಸಲಹೆಗಾರರು**
ಶ್ರೀ ಆರ್. ಶೇಷಗಿರಿರಾವ್



**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ:ರೂ. 750/-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳಿಸಿ.
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ


## ಈ ಸಂಚಿಕೆಯಲ್ಲಿ.....


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಮ್ಮ ನಿಮ್ಮಲ್ಲಿ | **ಶಿವಕುಮಾರ್** | 3 |
| ಸಿಂಗಪುರ ಪತ್ರ | **ರೇಖಾ ಹೆಗಡೆ ಬಾಳೇಸರ** | 6 |
| ಜಿರಲೆ ಥೆರಪಿ | **ಗಣೇಶ ಹೆಗ್ಗಡೆ** | 9 |
| ದುಬೈ ಆಫೀಸನಲ್ಲಿ..... | **ಆರತಿ ಘಟಿಕಾರ್** | 13 |
| ಕೇಳು ಜನಮೇಜಯ | **ಎಚ್. ಶಾಂತರಾಜ ಐತಾಳ** | 17 |
| ತುಂತುರು | **ದಂನಾಆ** | 19 |
| ಒಂದು ಮೂಳೆಯ ಕತೆ | **ಸಿ.ಆರ್. ಸತ್ಯ** | 22 |
| ಪರದೇಶದಲ್ಲಿ ವೆಜ್ಜು.... | **ಜಿ.ಎಸ್. ನಾಗನಾಥ್** | 25 |
| ಕೊರವಂಜಿ ಪದಬಂಧ | **ವಿದ್ಯಾ ವಿ. ಹಾಲಭಾವಿ** | 29 |
| ಹ್ಯಾಮ್ಲೆಟ್ ಹಿರಿಯಣ್ಣನ... | **ಡಾ|| ಸಿ.ಕೆ.ಎನ್. ರಾಜ** | 30 |
| ದುಡಿತದ ಮಿಡಿತ | **ಬೇಲೂರು ರಾಮಮೂರ್ತಿ** | 32 |
| ಮ್ಯಾಗಿಗೊಂದು... | **ಇ.ಆರ್. ರಾಮಚಂದ್ರನ್** | 36 |
| ಯಾ ದಿಕ್ಕಿಗೆ ಕಮೋಡ್... | **ಪ್ರಶಾಂತ ಅಡೂರ** | 39 |


**ಮುಖಪುಟ ವ್ಯಂಗ್ಯಚಿತ್ರ - ರಘುಪತಿ ಶೃಂಗೇರಿ**


ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 003. email: koravanji42@hotmail.com



ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ, ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com



*ಮುದ್ರಣ: ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



*Maggie* ನಲ್ಲಿರುವ ಸೀಸದ ಬಗ್ಗೆ *See-Saw* ಆಗುವಂತಿದೆ !!

★★★

ಎರಡು ದಿನಗಳಲ್ಲಿ ಮುಂಗಾರು ತೀವ್ರ

– ನಿರ್ದೇಶಕಿ ಗೀತಾ, ಅಗ್ನಿ ಹೋತ್ರಿ

***● ಆರೆ !!***

★★★

ಕ್ರಿಕೆಟ್ ಬೆಟ್ಟಿಂಗ್, ವಿಶೇಷ ಪೋಲಿಸ್ ದಳ ರದ್ದು – ಸುದ್ದಿ

***● BAILಗಳೇ ಕೆಳಗೆ ಉರುಳಿದಂತಿದೆ !!***

★★★

ಲೋಕೋಪಯೋಗಿ ಇಂಜಿನಿಯರ್ ನಿವಾಸದಲ್ಲಿ

ಲೋಕಾಯುಕ್ತ ದಾಳಿ – ಶೀರ್ಷಿಕೆ

***● ಅವರು 'ಲೋಕಾ – ಸಮಸ್ಥಾ ಸುಖಿನೋ ಭವಂತು'***

***ಎಂದು ಬಲವಾಗಿ ನಂಬಿದ್ದರಂತೆ !!***

★★★

ಒಂದೇ ನಿಮಿಷದಲ್ಲಿ 52 ಚಕ್ರ ಲಾಗ ಹಾಕಿದ ಹುಡುಗ – ಸುದ್ದಿ

***● ಅವನು ರಾಜಕೀಯ ಸೇರುತ್ತಾನೆಂಬುದು ಶುದ್ಧ ಕುಹಕ !!***

★★★

'ಗಡಿ–ಬಿಡಿ ಇನ್ನಿಲ್ಲ' – ಬಾಂಗ್ಲಾ ಒಪ್ಪಂದದ ಶೀರ್ಷಿಕೆ

***● ಆಹಾ, ಶೀರ್ಷಿಕೆ ಅಂದರೆ ಹೀಗಿರಬೇಕು !!***

★★★

ಬಾಂಗ್ಲಾ ವಿರುದ್ಧ ಒಂದೆರಡು ಸೋಲು ಅನುಭವಿಸಲು ಕ್ರಿಕೆಟ್ ತಂಡ ಆಲೋಚಿಸುತ್ತಿದೆಯಂತೆ !!

***● 'ಕ್ರಿಕೆಟ್ ರಾಜಕೀಯ' ಎಂದರೆ ಇದೇ !!***

★★★

ದ್ರಾವಿಡ್‌ಗೆ ಬಿ.ಸಿ.ಸಿ.ಐ. ಸಲಹಾ ಸಮಿತಿಯಲ್ಲಿ ಸ್ಥಾನ? – ಕ್ರೀಡಾ ಸುದ್ದಿ

***● ಹೌದು, ಆರ್ಯರ ಆರ್ಭಟ ಹೆಚ್ಚಾಗಿದೆ !!***

★★★

## ನಮ್ಮ ನಿಮ್ಮಲ್ಲಿ

ನಲವತ್ತರ ದಶಕದಲ್ಲಿ ಪ್ರಾರಂಭವಾದ ಇಂಗ್ಲೀಷ್ ಹಾಸ್ಯ ವಾರಪತ್ರಿಕೆ ಶಂಕರ್ಸ್ ವೀಕ್ಲಿ ಮತ್ತು ಕನ್ನಡ ಹಾಸ್ಯ ಮಾಸಿಕ ಕೊರವಂಜಿ ಇವುಗಳು ಹುಟ್ಟುವುದಕ್ಕೆ ಸುಮಾರು ಮೂರು ದಶಕಗಳ ಮುಂಚೆಯೇ ಕರ್ನಾಟಕದಲ್ಲಿ ಒಂದು ಇಂಗ್ಲೀಷ್ ಹಾಸ್ಯ ವಾರಪತ್ರಿಕೆ ಜನ್ಮತಳೆದದ್ದು ನಿಮಗೆ ತಿಳಿದಿತ್ತೇ? ನನಗಂತೂ ಮೊನ್ನೆ ಗೆಳೆಯ ಕೃಷ್ಣ ಬಂದು ಈ ಬಗ್ಗೆ ತಿಳಿಸುವವರೆಗೂ ಈ ಬಗ್ಗೆ ತಿಳಿದೇ ಇರಲಿಲ್ಲ. 1916ನೇ ಇಸವಿ ಜುಲೈ ತಿಂಗಳು ಮೈಸೂರಿನ ಮಹಾರಾಜಾ ಕಾಲೇಜಿನ ಇಬ್ಬರು ಪ್ರತಿಭಾವಂತ ತರುಣರು ತಮ್ಮ ಅಮಿತ ಉತ್ಸಾಹವನ್ನೇ ಬಂಡವಾಳವಾಗಿಟ್ಟುಕೊಂಡು ಹೊರತಂದ ಇಂಗ್ಲೀಷ್ ವಾರಪತ್ರಿಕೆ ''ದ ಇರ್ರೆಸ್ಪಾನ್ಸಿಬಲ್''. ಈ ತಿಂಗಳು (ಜುಲೈ 2015) ಈ ಪತ್ರಿಕೆಯ ಶತಮಾನೋತ್ಸವದ ಪ್ರಾರಂಭ. ಪತ್ರಿಕೆಯ ಹುಟ್ಟಿಗೆ ಕಾರಣರಾದವರು ಜೋಸೆಫ್ ರೂಬೆನ್ (ಖ್ಯಾತ ಲೇಖಕ ಬನ್ನಿ ರೂಬೆನ್ ಅವರ ತಂದೆ) ಮತ್ತು ಎಚ್. ಸುಬ್ಬರಾವ್ (ನಮ್ಮ ಕೃಷ್ಣನ ತೀರ್ಥರೂಪರು).

ರೂಬೆನ್ ಮತ್ತು ಸುಬ್ಬರಾವ್ ತಮ್ಮ ಬಿ.ಎ. ಕ್ಲಾಸಿನಲ್ಲಿ ಅಕ್ಕಪಕ್ಕ ಕೂಡಬೇಕಾಗಿತ್ತು (ಕ್ರಮವಾಗಿ ಆರ್ ಮತ್ತು ಎಸ್). ಆಗ ಮೊಳೆತ ಗೆಳೆತನವನ್ನು ಇವರಿಬ್ಬರೂ ಆಜೀವ ಪರ್ಯಂತ ಪೋಷಿಸಿಕೊಂಡು ಬಂದದ್ದೇ ಒಂದು ಹೆಗ್ಗಳಿಕೆ. ರೂಬೆನ್ ಯೆಹೂದಿ. ಇವರ ಅಪ್ಪ ಮೈಸೂರು ಮಹಾರಾಜರ ಅಶ್ವದಳದ ಮುಖ್ಯಸ್ಥರಾಗಿ ಅಧಿಕಾರ ವಹಿಸಲು ಮೈಸೂರಿಗೆ ವಲಸೆಬಂದು ಇಲ್ಲೇ ನೆಲೆಸಿದ್ದರು. ಸಹಜ ಹಾಸ್ಯ ಮನೋಭಾವ ಅಪರಿಚಿತ ರಾದವರನ್ನೂ ಒಟ್ಟಿಗೆ ತರುತ್ತದೆ. ರಾ.ಶಿ. ಮತ್ತು ನಾ. ಕಸ್ತೂರಿ, ನಮ್ಮ ಅಪರಂಜಿ ಬಳಗದ ಸದಸ್ಯರು. ಇದಕ್ಕೆ ಒಳ್ಳೆಯ ನಿದರ್ಶನ. ರೂಬೆನ್ ಮತ್ತು ಸುಬ್ಬರಾವ್ ಪರಸ್ಪರ ಹತ್ತಿರವಾದದಕ್ಕೆ ಇವರುಗಳ ಹಾಸ್ಯಪ್ರಿಯತೆಯೇ ಕಾರಣವಿರಬಹುದು. ಅದು ಹೇಗಾದರೂ ಇರಲಿ, ಇಬ್ಬರೂ ಸೇರಿ ''ದ ಇರ್ರೆಸ್ಪಾನ್ಸಿಬಲ್'' ಪತ್ರಿಕೆಯ ಮೊದಲ ಸಂಚಿಕೆಯನ್ನು ಮೇಲೆ ಹೇಳಿದಂತೆ 1916ರ ಜುಲೈ ತಿಂಗಳಂದು ಹೊರತಂದೇ ಬಿಟ್ಟರು. ಪತ್ರಿಕೆಯ ಸಂಪಾದಕರು ಸುಬ್ಬರಾವ್. ಇವರು ತಮ್ಮನ್ನು ನಟ್ ಎಂದು ಕರೆದುಕೊಂಡರೆ, ಪತ್ರಿಕೆಯ ವ್ಯವಸ್ಥಾಪಕ ರೂಬೆನ್ ತಮ್ಮನ್ನು ಜಿಂಜರ್ (ಶುಂಠಿ) ಎಂದು ಹೆಸರಿಸಿಕೊಂಡರು. ಪತ್ರಿಕೆಯ ಧ್ಯೇಯ ಫ್ರೆಂಚ್ ಭಾಷೆಯ ''ಟೂಜೂ ಪ್ರೆತ್'' ಇದರರ್ಥ ಸದಾ ಸಿದ್ಧರು (ಆಲ್ವೇಸ್ ರೆಡಿ) ಎಂದಾಗುತ್ತದಂತೆ. ಸುತ್ತಮುತ್ತಣ ಹಾಸ್ಯ ಪ್ರಸಂಗಗಳನ್ನು ಹೆಕ್ಕಿ ಬರೆಯುವುದಕ್ಕೆ ಸದಾ ಸಿದ್ದರು ಎಂಬ ಭಾವ ಇರಬಹುದು. ಬಿಡಿಪ್ರತಿಯ ಬೆಲೆ ಆರುಕಾಸು. (ಹನ್ನೆರಡು ಕಾಸು ಒಂದು ಆಣೆಗೆ ಸಮ. ಹದಿನಾರು ಆಣೆಗಳಿಗೆ ಒಂದು ರೂಪಾಯಿ!) ಇಷ್ಟು ಕಡಿಮೆ ಬೆಲೆ ಇದ್ದರೂ ಎರಡು ವರ್ಷಗಳ ನಂತರ ಈ ಪ್ರಭೃತಿಗಳ ವಿದ್ಯಾರ್ಥಿದೆಸೆ ಮುಗಿದು ಪತ್ರಿಕೆಯನ್ನು ನಿಲ್ಲಿಸಿದಾಗ, ಹಿತೈಷಿಗಳಿಗೆಲ್ಲಾ ಒಂದು ಸಂತೋಷ ಕೂಟವನ್ನು ಕೊಟ್ಟು ಉಳಿದ ಐವತ್ತು ರೂಪಾಯಿಗಳನ್ನು ಕಾಲೇಜಿನ ಸಾರ್ವಜನಿಕ ಕಾರ್ಯಗಳಿಗಾಗಿ ದಾನ ಮಾಡಿದರಂತೆ.

ಪತ್ರಿಕೆಯ ಬಹುತೇಕ ಬರಹಗಳು ಆಗಿನ ಕಾಲದ ಜನಜೀವನವನ್ನು ಬಹು ಸ್ವಾರಸ್ಯವಾಗಿ ಪ್ರತಿಬಿಂಬಿಸುವಂತಿವೆ. ಈಗಿನಂತೆಯೇ ಆಗಿನ ವಿದ್ಯಾರ್ಥಿಗಳೂ ಕ್ಲಾಸಿನಲ್ಲಿ ಕುಳಿತು ಪಾಠ ಕೇಳುವುದಕ್ಕೆ ಅಷ್ಟೇನು ಉತ್ಸಾಹ ತೋರುತ್ತಿರಲಿಲ್ಲ. ಕ್ಲಾಸಿಗೆ ಚಕ್ಕರ್ ಹೊಡೆದು ಕಾಫಿ ಕ್ಲಬ್‌ಗಳು, ಸಿನಿಮಾಗಳ ಮ್ಯಾಟಿನಿ ಷೋಗಳು ಇವುಗಳಿಗೆ ಹೋಗುವುದರಲ್ಲೇ ವಿದ್ಯಾರ್ಥಿಗಳ ಆಸಕ್ತಿ. ಇದನ್ನು ಲೇವಡಿ ಮಾಡಿ ಬರೆದಿರುವ ಈ ಲೇಖನ ನೋಡಿ.

ಸಂಪಾದಕರಿಗೊಂದು ಪತ್ರ

(ಈ ಪತ್ರದಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳಿಗೆ ದ ಇರ್ರೆಸ್ಪಾನ್ಸಿಬಲ್
ಸಂಪಾದಕರು ಜವಾಬ್ದಾರರಲ್ಲ)

ಮಾನ್ಯರೇ,

ಬೇಸರ ತರಿಸುವ ಕ್ಲಾಸಿನ ಉಪನ್ಯಾಸಗಳಿಂದ ವಿದ್ಯಾರ್ಥಿವೃಂದ ಬೇಸತ್ತಿರುವುದನ್ನು ನಿಮ್ಮ ಬರಹದಲ್ಲಿ ನೀವು ಬಹು ಚೆನ್ನಾಗಿ ಬಿಂಬಿಸಿದ್ದೀರಿ. ಅದರಿಂದ ತಪ್ಪಿಸಿಕೊಳ್ಳಲು ವಿದ್ಯಾರ್ಥಿಗಳು ಕಾಫಿ ಕ್ಲಬ್‌ಗಳಿಗೆ ಸಿನಿಮಾಗಳಿಗೆ ಹೋಗುವುದನ್ನು ಉತ್ತೇಜಿಸಬೇಕೆಂಬ ನಿಮ್ಮ ಸಲಹೆಗೆ ನನ್ನ ಸಂಪೂರ್ಣ ಸಹಮತ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಈ ಪ್ರವೃತ್ತಿಗಳನ್ನು ಕಡ್ಡಾಯ ಮಾಡಿ ಅದನ್ನೇ ಪರೀಕ್ಷೆಗೂ ಒಂದು ಪೇಪರಿನಂತೆ ಏಕೆ ಇಡಬಾರದು? ಇದಕ್ಕೆ ಸಹಾಯಕವಾಗುವಂತೆ ಇಲ್ಲೊಂದು ಮಾದರಿ ಪ್ರಶ್ನೆ ಪತ್ರಿಕೆ ಇಟ್ಟಿರುವೆ.

ಇಂತೀ

ವಿದ್ಯಾರ್ಥಿ ಶ್ರೇಯೋಭಿಲಾಷಿ

ಪ್ರಶ್ನೆ ಪತ್ರಿಕೆ

1. ಮೈಸೂರಿನ ಎರಡು ಕಾಫಿ ಕ್ಲಬ್‌ಗಳಲ್ಲಿ ಮಾರಾಟವಾಗುವ ಈ ತಿನಿಸುಗಳ ಗುಣಮಟ್ಟವನ್ನು ಹೋಲಿಕೆ ಮಾಡಿ ವಿವರಣೆ ನೀಡಿ.

ಅ. ಒಂದು ಸ್ವೀಟ್

ಆ. ಒಂದು ಖಾರ

ಇ. ಒಂದು ಕೇಕ್

2. ಮ್ಯಾಟಿನಿ ಷೋ ಮತ್ತು ಸಂಜೆಯ ಷೋ ಇವುಗಳಲ್ಲಿ ಯಾವುದು ಉತ್ತಮ ಎಂಬ ವಿಷಯವನ್ನು ಥಿಯೇಟರ್ ಮಾಲಿಕರ ಮತ್ತು ಪ್ರೇಕ್ಷಕರ ದೃಷ್ಟಿಯಿಂದ ವಿಶ್ಲೇಷಣೆ ಮಾಡಿ.

3. ಕಾಫಿ ಕ್ಲಬ್ಬೊಂದರಲ್ಲಿ ಗಹನವಾದ ವಿಷಯವೊಂದರ ಚರ್ಚೆ ನಡೆಯುತ್ತಿರುವಾಗ ಅಪರಿಚಿತನೊಬ್ಬನು ಬಾಯಿ ಹಾಕುವುದು ಅಲ್ಲಿನ ಸಂಸ್ಕೃತಿಗೆ ಹೊಂದುತ್ತದೆಯೇ? ಚರ್ಚಿಸಿ.

4. ಪ್ರಹ್ಲಾದ ಚರಿತ್ರೆ ನಾಟಕದಲ್ಲಿ ಹಿಂದೂಸ್ಥಾನಿ ರಾಗದಲ್ಲಿ ಹಿರಣ್ಯಕಷಿಪು ಹಾಡುವುದು. ಸಾಧುವೇ?

5. ಕಳೆದ ವಾರದಲ್ಲಿ ನೀವು ಕೇಳಿರುವ ಅತ್ಯಂತ ರಸವತ್ತಾದ ಗಾಸಿಪ್ ಯಾವುದು? ವಿವರಿಸಿ.

6. ಮೈಸೂರಿನ ಅದ್ಭುತಗಳಲ್ಲಿ ಕೆಳಗೆ ನಾಲ್ಕನ್ನು ಸೂಚಿಸಿದ್ದೇವೆ.

ಅ. ಒಬ್ಬರ ಉಪನ್ಯಾಸಗಳು ಆ. ಒಬ್ಬರ ಹಾಡುಗಾರಿಕೆ

ಇ. ಒಬ್ಬರ ವೇಷಭೂಷಣಗಳು ಈ. ಒಬ್ಬರ ವಾದವಿವಾದಗಳು

ಇವರುಗಳ ಹೆಸರುಗಳನ್ನು ಸೀಲ್ ಮಾಡಿದ ಲಕ್ಕೋಟೆಯಲ್ಲಿ ಬರೆದು ತಿಳಿಸಿ.

*(ಈ ಪ್ರಶ್ನೆಗಳಿಗೆ ಉತ್ತರ ಬರೆದು ಪ್ರಥಮ ಸ್ಥಾನವನ್ನು ಗಳಿಸಿದ ವಿದ್ಯಾರ್ಥಿಗೆ ಆತ ಆರಿಸಿದ ಈ ಸಿಹಿಗಳಲ್ಲಿ (ಜಿಲೇಬಿ, ಜಾಮೂನ್, ಮೈಸೂರು ಪಾಕ್) ಒಂದನ್ನು ಒಂದು ಸೇರಿನಷ್ಟು ಕೊಡಲಾಗುವುದು.)*

ಅಂದ ಹಾಗೆ ಈ ಸಂಚಿಕೆಯೊಂದರಲ್ಲಿ ಕಂಡುಬಂದ ಜಾಹಿರಾತು ಬಹು ಸ್ವಾರಸ್ಯಕರ ಎನ್ನಿಸಿತು. ಹಾಗಾಗಿ ಅದರ ಕನ್ನಡ ಅವತರಣಿಕೆಯನ್ನು ಇಲ್ಲಿ ನೀಡಿರುವೆ.

*ಪದ್ಯ ಪರಿಣಿತರೇ, ಪ್ರವಾದಿಗಳೇ, ಪ್ರಜಾರಂಜಕರೇ,*
*ಪೂಜಾರಿಗಳೇ ಹಾಗೂ ಪಾಮರರೇ*
*ಪೀಟರ್ಸ್‌ಗೆ ಪಾದಬೆಳೆಸಿ!*

*ನಿಮ್ಮ ಸಂಬಳವೆಷ್ಟು?*
*500 ರಕ್ಕೆ ಹೆಚ್ಚಿದೆಯೇ? ಕಾರನ್ನು ಕೊಳ್ಳಿ*
*300 ರಕ್ಕೆ ಹೆಚ್ಚಿದೆಯೇ? ಮೋಟಾರ್ ಸೈಕಲ್ಲನ್ನು ಕೊಳ್ಳಿ*
*300 ರಕ್ಕೆ ಕಡಿಮೆ ಇದೆಯೇ? ಸೈಕಲ್ಲನ್ನು ಕೊಳ್ಳಿ*
*ಹೇಗಾದರೂ ಇರಲಿ, ಕಾರಿನಲ್ಲಿ ಓಡಾಡುವುದನ್ನು ತಪ್ಪಿಸಿಕೊಳ್ಳಬೇಡಿ*
*ನಿಮಗಾಗಿಯೇ ಬಾಡಿಗೆ ಕಾರುಗಳಿವೆ.*

*ಎಫ್. ಇ. ಪೀಟರ್ಸ್ ಎಂಡ್ ಕೋ.*
*ಕರ್ಜನ್ ಪಾರ್ಕ್, ಮೈಸೂರು*
*ವಿಶೇಷ ಆಕರ್ಷಣೆ ಹೈರ್ ಪರ್ಚೇಸ್ ವ್ಯವಸ್ಥೆ*

ಬಹು ಉತ್ತಮ ಮಟ್ಟದ ಹಾಸ್ಯ ಮನೋಭಾವವನ್ನು ಈ ಪತ್ರಿಕೆಯಲ್ಲಿ ಕಂಡು ನನಗೆ ಹೆಮ್ಮೆ ಎನಿಸಿತು. ಈ ಪತ್ರಿಕೆಯ ಸಂಚಿಕೆಗಳನ್ನು ನೋಡಿ, ಅವುಗಳ ಪರಿಚಯವನ್ನು ಬರೆಯುವ ಅವಕಾಶ ಕಲ್ಪಿಸಿದ ಗೆಳೆಯ ಕೃಷ್ಣನಿಗೆ ನಾನು ಋಣಿ.

**ಶಿವಕುಮಾರ್**

# ಸುಂಗೇ ದಡದಲ್ಲಿ

**- ರೇಖಾ ಹೆಗಡೆ ಬಾಳೇಸರ**

'**ತುಂ**ಗೆ ದಡದಲ್ಲಿ.... ಹೊಂಗೆ ನೆರಳಲ್ಲಿ... ಹರಟೆ ಹೊಡೆಯಬೇಕು...

ಮಾತು ಸಾಕಾಗಿ.... ಮೌನ ಬೇಕಾಗಿ... ನದಿಯ ನೋಡಬೇಕು....'

ಪ್ರತಿ ದಿನ ವಾಕ್ ಹೋದಾಗ ಈ ಉಲ್ಲಾಸಭರಿತ ಹಾಡು ನೆನಪಾದರೆ ಅದಕ್ಕೆ ತಂಗಾಳಿ ಸೂಸುವ ಹೊಂಗೆ ಮರಗಳೊಂದೇ ಅಲ್ಲ, ಹೊಳೆಯಂಚಿನ ದಾರಿಯೂ ಕಾರಣ. ಸಿಂಗಪುರದಲ್ಲಿ ತುಂಗೆ ಇಲ್ಲದೇ ಇರಬಹುದು, ಆದರೆ ಸುಂಗೇ ಬೇಕಾದಷ್ಟಿವೆ. ಸುಂಗೇ ಎಂದರೆ ನದಿ, ಇಲ್ಲಿನ ಅಧಿಕೃತ ಭಾಷೆಗಳಲ್ಲೊಂದಾದ ಮಲಯ್ ಭಾಷೆಯಲ್ಲಿ ನಮ್ಮ ಮನೆಗೆ ಹತ್ತಿರದಲ್ಲಿ 'ಉಲುಪಂಡನ್' ಎಂಬ ನದಿಯೊಂದಿದೆ. ಮಲಯ್ ಭಾಷೆಯಲ್ಲಿ ಸುಂಗೇ ಉಲು ಪಂಡನ್ ಎಂದರೆ ಪಂಡನ್ (ಕೇದಿಗೆ) ಗಿಡಗಳೆಡೆಗಳಲ್ಲಿ ಹುಟ್ಟಿದ (ಉಲು ಎಂದರೆ ಮೂಲ) ನದಿ ಎಂದರ್ಥ. ಹೆಸರಿಗಷ್ಟೇ ನದಿ... ಗಾತ್ರ, ಪಾತ್ರ ನೋಡಿದರೆ ಸಾಧಾರಣ ಹೊಳೆ! ವರ್ಷಾವಧಿ 'ಧೋ...' ಎಂದು ಸುರಿಯುವ ಮಳೆಯ ನೀರನ್ನು ಸಾಗಿಸುವ ಬಸಿಗಾಲುವೆಗಳೆಲ್ಲಾ ಸೇರಿ, ನಮ್ಮೂರಿನ ಭಾಷೆಯಲ್ಲಿ ಹೇಳುವುದಾದರೆ 'ಮಂಡಗಾಲುವೆ' ಆಗಿ, ಇಂಥ ಹತ್ತಾರು ಮಂಡಗಾಲುವೆಗಳ ನೀರು ಸೇರಿ 'ರಾಜಕಾಲುವೆ' ಆಗಿ... ಅಂತೂ ಒಂದು ಹೊಳೆಯ ಸ್ವರೂಪ ಇದೆ ಉಲು ಪಂಡನ್‌ಗೆ. ಬೆಂಗಳೂರಿನಲ್ಲಿ ಕೊಳಚೆ ನೀರು ಸಾಗಿಸುವ 'ಯೋಜನಗಂಧಿ' ಕಾಲುವೆಗಳಿಗೂ ರಾಜಕಾಲುವೆ ಎನ್ನುತ್ತಾರೆ, ಆದರೆ ಅಸಲಿ 'ರಾಜ' ಕಾಲುವೆಗಳು ಸಿಂಗಪುರದವೇ! ಅಷ್ಟೋ, ಇಷ್ಟೋ.... ಶುದ್ಧ ಮಳೆ ನೀರು ಹೊತ್ತು, ಒಂದು ನಮೂನೆ ಡಯಟ್ ದೇಹಿ ಕೋಮಲಾಂಗಿಯರ ನೆನಪಿಸುವ ರೀತಿ ಸಪೂರ ಧಾರೆಯಲ್ಲಿ ಹರಿಯುವ ಕಾಲುವೆಗಳಿಗೂ ಆರಡಿ ಅಗಲ ಕಾಂಕ್ರೀಟ್ ದಂಡೆ ಎರಡೂ ಕಡೆ. ದಂಡೆಗೆ ಹಾಕಿದ ಬೇಲಿಯ ಆಚೆ ಓಡು, ನಡಿಗೆ, ಸೈಕಲ್ ತುಳಿಯುವವರ ಅನುಕೂಲಕ್ಕಾಗಿ ಸುಗಮ ರಸ್ತೆ, ಆ ದಂಡೆಯಿಂದ ಈ ದಂಡೆಗೆ ಭಾವಣೆ ಇರುವ ಪುಟ್ಟ ಸೇತುವೆಗಳು, ಓಡಿ ಸುಸ್ತಾದರೆ, ಮಳೆ ಬಂದರೆ ಎಂದು ಅಲ್ಲಲ್ಲಿ ತಂಗು ಮನೆಗಳು, ವ್ಯಾಯಾಮ ಸಲಕರಣೆಗಳಿಂದ ಸಜ್ಜುಗೊಂಡ ಬಯಲು ವ್ಯಾಯಾಮ ಶಾಲೆಗಳು..., ಉದ್ಯಾನಗಳು, ವೀಕ್ಷಣಾಗಟ್ಟೆಗಳು... ಇಷ್ಟೆಲ್ಲಾ ಇದ್ದ ಮೇಲೆ ರಾಜಕಾಲುವೆ ಏಕೆ, ಸಾಮ್ರಾಟ ಕಾಲುವೆ ಎಂದರೂ ತಪ್ಪಿಲ್ಲ.

**ಉತ್ತರ ಕರ್ನಾಟಕದಿಂದ ಸಿಂಗಪುರಕ್ಕೆ ಹಾರಿರುವ ರೇಖಾ ಹೆಗಡೆ ಒಬ್ಬ ಮಾಜಿ ಪತ್ರಕರ್ತೆ. ಈಗ ಫುಲ್ ಟೈಂ ಅಮ್ಮ ಆಗಿದ್ದರೂ ಬರೆಯುವ ಹವ್ಯಾಸದಿಂದ ರಿಟೈರ್ ಆಗಿಲ್ಲ. ಕಾಡಿನ ಪರಿಸರದಲ್ಲಿ ಬೆಳೆದಿದ್ದ ರೇಖಾ ಅವರಿಗೆ ಅಂಥದ್ದೇ ಛಾಪು ಮೂಡಿಸುವ ಸಿಂಗಪುರ ಬಲು ಇಷ್ಟವಂತೆ. ಅವರ ಅನುಭವಗಳ ಮಾಲಿಕೆ ಇದೀಗ ಅಪರಂಜಿ ಓದುಗರಿಗೆ. ಇಲ್ಲಿದೆ ಸಿಂಗಪುರ ಪತ್ರದ ಮೊದಲ ಕಂತು.**

ಇರಲಿ, ಸುಂಗೇ ಉಲು ಪಂಡನ್ ವಿಷಯಕ್ಕೆ ಬರೋಣ. 7-8 ಕಿ.ಮೀ. ಉದ್ದದ ಈ ಹೊಳೆ ಅರ್ಧದೂರದವರೆಗೆ ಮಾತ್ರ ಮೇಲೆ ಹೇಳಿದಂತೆ ಸೊರಗಿ ಇರುವುದು. ಉಳಿದರ್ಧ ದೂರ ವಿಸ್ತಾರವಾಗಿ ನಿಂತ ನೀರು ಅದರಲ್ಲಿ. ಏಕೆಂದರೆ ಸಿಂಗಪುರದ ಇತರ ಎಲ್ಲ ನದಿಗಳಂತೆಯೇ ಇದಕ್ಕೂ ಸಮುದ್ರ ಸೇರುವ ಮುನ್ನ ಅಣೆಕಟ್ಟು ಕಟ್ಟಿದ್ದಾರೆ. ಸಿಹೀನೀರು ಕೂಯಿಲಿಗೋಸ್ಕರ ಆ ಅಣೆಕಟ್ಟಿನ ಹಿನ್ನೀರು ಸೊರಗಿದ ಉಲು ಪಂಡನ್ ಗಾತ್ರ ಹಿಗ್ಗಿಸಿ, ಹೊಳೆಯಿಂದ ನದಿ ದರ್ಜೆಗೆ ಏರಿಸುತ್ತದೆ. ಇಲ್ಲಿನ ವಿವಿಧ ಉದ್ಯಾನಗಳನ್ನು ಸಂಪರ್ಕಿಸುವ ನ್ಯಾಷನಲ್ ಪಾರ್ಕ್ ಕನೆಕ್ಟರ್ ಮಾರ್ಗ ಈ ನದಿಯ ಗುಂಟವೂ ಹಾದು ಹೋಗಿದ್ದು, 7 ಕಿ.ಮೀಗೂ ಹೆಚ್ಚು ಉದ್ದದ ಸುರಳೀತ ಓಡು-ನಡಿಗೆ ರಸ್ತೆ ಲಭ್ಯವಿದೆ. ಹೀಗಾಗಿ ಇದರ ಗುಂಟ ದಿನವೂ ನನ್ನ ನಡಿಗೆ, ಸೈಕಲ್ ತುಳಿತ ಕಾರ್ಯಕ್ರಮ.

ಕಣ್ಣು, ಕಿವಿ, ಮನಸು ತೆರೆದಿಟ್ಟು ಹೊರಟೆನೆಂದರೆ ಎದುರಾಗುವವರು ಎಂಥೆಂಥ, ಎಷ್ಟೊಂದು ತರಹದ ಜನ!! ಮ್ಯಾರಥಾನ್‌ಗೆಂದೋ, ಇನ್ಯಾವುದೋ ಸ್ಪರ್ಧೆಗೆಂದೋ ತಾಲೀಮು ಮಾಡುವ ಓಡಾಳುಗಳು, ಬೊಜ್ಜು ಇಳಿಸಲು ಬೆವರು ಹರಿಸುವ ಕೊಬ್ಬಿಗರು, ಓಡಿದಂತೆ ರಭಸದಿಂದ ನಡೆಯುವವರು, ಹೊಳೆಯಲ್ಲಿರುವ ಆಮೆಗಳಿಗೆ ಸ್ಪರ್ಧೆ ಒಡ್ಡುವ 'ಮಂದಗಾಮಿ'ಗಳು, ಅಸಡಾಬಸಡಾ ಕಾಲು ಒಗೆಯುತ್ತ ದಾರಿಗಡ್ಡ ಬರುವ 'ಅಡ್ಡದಾರಿ' ಹೋಕರು, ಕಿವಿಗೆ ಇಯರ್ ಫೋನ್ ಸಿಕ್ಕಿಸಿಕೊಂಡು ಜಗತ್ತಿಗೂ ತಮಗೂ ಸಂಬಂಧ ಇಲ್ಲವೆನ್ನುವಂತೆ ಸಂಗೀತದ ಅಮಲಲ್ಲಿ ತೇಲುವ 'ಅಮಲ್ದಾರ'ರು, ಸೈಕಲ್, ಸ್ಕೇಟ್, ಬೋರ್ಡ್, ಇನ್ಲೈನ್ ಸ್ಕೇಟ್ಸ್, ಸ್ಕೂಟರ್ ಏರಿ ಬರುವ ಚಕ್ರಧಾರಿಗಳು... ಇವರ ಮಧ್ಯೆ ವಿಶೇಷ ಎನಿಸುವವರು ವಯಸ್ಸನ್ನು ಹಿಂದಿಕ್ಕಿ ಮುಂದೆ ಓಡುವ ಅಜ್ಜ-ಅಜ್ಜಿಯರು. ಅವರ ಮುಖದ ನೆರಿಗೆ ಹೇಳುವ ವಯಸ್ಸಿಗೂ, ಕಾಲಿನ ಗತಿ ತೋರಿಸುವ ವಯಸ್ಸಿಗೂ ತಾಳೆಯೇ ಇಲ್ಲ. ಅಮಿತ ಉತ್ಸಾಹ ಅವರ ಕಾಲಿಗೆ ಗಾಲಿ ತೊಡಿಸಿದೆಯೇನೋ!! ಅಲ್ಲೇ ಕಿರು ಸೇತುವೆಯ ನೆರಳಡಿ ನಿಂತು ಪ್ರತಿ ದಿನ 'ತಾಯ್ ಚಿ' ಅಭ್ಯಾಸ ಮಾಡುವ ಹಿರಿಯಮ್ಮಂಗೆ ಅರವತ್ತೋ, ಎಪ್ಪತ್ತೋ? ಇಲ್ಲಿಯ ಜನ ಆಗಿರುವ ವಯಸ್ಸಿಗಿಂತ ಹತ್ತು ವರ್ಷ ಚಿಕ್ಕವರಾಗಿ ಕಾಣುವುದಂತೂ ಸತ್ಯ! ದಿನಾ ಮೂರು ತಾಸಾದರೂ ಯುನಿ ಸೈಕಲ್ ಓಡಿಸುವ ಊಊ ಊದ್ದನೆಯ ಅಜ್ಜನಿಗೆ ಎಂಬತ್ತಾಗಿರಬಹುದೇ? ಉತ್ಸಾಹ, ಬದ್ಧತೆ ನೋಡಿದರೆ ಊಹಿಸುವುದೂ ಕಷ್ಟ. ಇನ್ನು ಇಡೀ ದಿನ ತಂಗುಮನೆಯೊಂದರಲ್ಲಿ ಕುಳಿತು, ಕನ್ನಡಕದ ಹಂಗಿಲ್ಲದೇ ಪುಟ್ಟ ಉಳಿ, ಸುತ್ತಿಗೆ, ಅರ ಹಿಡಿದು, ಮರದ ಸೌಟುಗಳನ್ನು ತಿಕ್ಕಿ, ತೀಡಿ ತಯಾರಿಸುವ ಅಜ್ಜನ ದೇಹ ಎಷ್ಟು ಮುದಿಯಾಗಿದೆಯೆಂದರೆ ಆತ ಎಂದೋ ಕಳೆದು ಹೋದ ಕಾಲದ ಪಳೆಯುಳಿಕೆಯಂತಿದ್ದಾನೆ. ನೋಡಿದಾಗಲೆಲ್ಲಾ, 'ಅಜ್ಜಾ, ನಿಂಗೆ ನೂರಾಯ್ತಾ' ಎಂದು ಕೇಳಬೇಕೆನಿಸುತ್ತದೆ. ಆದರೆ ನನಗೆ ಮಂಡಾರಿನ್ ಗೊತ್ತಿಲ್ಲ, ಆತನಿಗೆ ಇಂಗ್ಲೀಷ್ ಬರುವಂತೆ ಕಾಣುವುದಿಲ್ಲ. ದಿನಾ ತಂಗುಮನೆಗಳಲ್ಲಿ, ಮರದಡಿಯ ಬೆಂಚಿನ ಮೇಲೆ ಕುಳಿತು ಕತೆಕೊಚ್ಚುವ ಅಜ್ಜ-ಅಜ್ಜಿಯರು ಅದೆಷ್ಟು ವರ್ಷದಿಂದ ಹೀಗೆ ಸೇರುತ್ತಿದ್ದಾರೋ...!

ಉಲುಪಂಡನ್ ಉದ್ದಕ್ಕೂ ಕಾಣುವ ನೀರು ಉಡಗಳು (ವಾಟರ್ ಮಾನಿಟರ್) ಮುಂಗಾಲು, ಹಿಂಗಾಲುಗಳನ್ನು ಹಿಂದೆ ಮಡಚಿ ಬಾಲದ ಸಹಾಯದಿಂದ ಸುಂಯ್ಯಂತ ಈಜುವುದನ್ನು ನೋಡುತ್ತಿದ್ದರೆ, 'ಅಯ್ಯೋ, ಬಾಲವೊಂದಿದ್ದರೆ ನಾನೂ ಹೀಗೇ ಈಜುತ್ತಿದ್ದೆ' ಎನಿಸೀತು. ಮನುಷ್ಯರ ಸೂಟು ಸಿಕ್ಕೊಡನೆ ಪುಳಕ್ಕನೆ ನೀರೊಳಗೆ ಮುಳುಗುವ ಆಮೆಗಳು, ಸುಖಾಸುಮ್ಮನೆ ಹೊಯ್ದಾಡಿ ಗಲಿಬಿಲಿ ಎಬ್ಬಿಸುವ ಗುಂಪು ಗುಂಪು ಮೀನುಗಳು, ಅದೆಲ್ಲಿಂದಲೋ ಮಿಂಚಿನಂತೆ ಬಂದೆರಗಿ ಮೀನು ಹೊತ್ತೊಯ್ಯುವ ಮಿಂಚುಳ್ಳಿ, ದಂಡೆಯ ಮರದಲ್ಲಿ ಉರುಟುರುಟು ತೂತು ಕೊರೆಯುವ ಚೂಪು ಕೊಕ್ಕಿನ ಮರಕುಟಿಗ, ಆಕಾಶಕ್ಕೆ ಹಬ್ಬಿದಂತೆ ಕಾಣುವ ಎತ್ತರದ ಮರದ ಮೇಲೆ ಗೂಡು ಕಟ್ಟಿರುವ ಅಪರೂಪದ ಗರುಡ... ಎಲ್ಲರಿಗೂ ಸುಂಗೇಯೊಂದಿಗೆ ಅನುಪಮ ಅನುಬಂಧ, ನನ್ನಂತೆ.

ಸಿಂಗಪುರದ ಇತರ ನದಿಗಳಾದ ರೋಚರ್, ವಾಂಪೋವ, ಸಿಂಗಪುರ, ಕಲ್ಲಾಂಗ್, ಸೆರಂಗೂನ್, ಗೇಲ್ಯಾಂಗ್... ಇವೆಲ್ಲಾ ಪಕ್ಕಾ ಕಾಂಕ್ರೀಟ್ ನದಿಗಳಾಗಿವೆ. ಉದ್ದಕ್ಕೂ ಕಾಂಕ್ರೀಟ್ ದಂಡೆ, ಜನವಸತಿ, ಸಮುದ್ರ ಸೇರುವ ಮುನ್ನ ಒಂದು ಅಣೆಕಟ್ಟೆ... ಎಲ್ಲಾ ನಿಂತ ನೀರಿನ 'ರಾಜಕಾಲುವೆ'ಗಳೇ! ಆದರೆ ಉಲು ಪಂಡನ್ ಪುಣ್ಯ, ಮಧ್ಯದಲ್ಲಿ ಒಂದಷ್ಟು ದೂರ ನೈಸರ್ಗಿಕ ದಂಡೆ, ಮರಗಿಡಗಳ ನೆರೆಹೊರೆ, ಪ್ರಾಣಿಪಕ್ಷಿಗಳೊಂದಿಗಿನ ಸಹಬಾಳ್ವೆಯ ಅವಕಾಶ ಇದೆ. ನೋಡು ನೋಡುತ್ತಿದ್ದಂತೆ ರೂಪು ಬದಲಿಸುವ ಸಿಂಗಪುರದಲ್ಲಿ ಈ ನೈಸರ್ಗಿಕ ವೈಭವ ಇನ್ನೆಷ್ಟು ದಿನವೋ!? ಅಲ್ಲಿಯವರೆಗಾದರೂ ಎಲ್ಲರಂತೆ ನಾನೂ ಇಯರ್ಫೋನ್ ಕಿವಿಗೊತ್ತಿಕೊಂಡು, ತಂಗಾಳಿಗೆ ಮುಖವೊಡ್ಡುತ್ತ ಸೈಕಲ್ ಹೊಡೆಯಬಹುದು. ಐಪೋಡ್ ಹಾಡಿಗೆ ದನಿಗೂಡತ್ತ 'ಸುಂಗೇ ದಡದಲ್ಲಿ.... ಹೊಂಗೆ ನೆರಳಲ್ಲಿ...' ಎಂದು ಗುನುಗಬಹುದು.

✺

---

## ✷✷ ಅಪರಂಜಿ ಸದಸ್ಯತ್ವದ ಅಭಿಯಾನ ✷✷

ನಿಮ್ಮ ಮೆಚ್ಚಿನ ಅಪರಂಜಿ ಈಗ ಸದಸ್ಯತ್ವದ ಅಭಿಯಾನ ಪ್ರಾರಂಭಿಸಿದೆ. ನೀವು ಮಾಡಬೇಕಾದುದು ಇಷ್ಟೇ. ಒಬ್ಬೊಬ್ಬ ಸದಸ್ಯರೂ ತಮ್ಮ ಕಡೆಯಿಂದ ಕನಿಷ್ಠ ಪಕ್ಷ ಇನ್ನೊಬ್ಬರು ಸದಸ್ಯರನ್ನು (ಇನ್ನೂ ಹೆಚ್ಚು ಸದಸ್ಯರನ್ನು ಮಾಡಿದರೂ ಸ್ವಾಗತ) ಅಪರಂಜಿ ಬಳಗಕ್ಕೆ ಸೇರಿಸಿ **ಹತ್ತು ವರ್ಷದ ಚಂದಾದಾರರನ್ನಾಗಿ ಮಾಡಿ**. ಅಪರಂಜಿ ಬೆಳೆಯಲಿ ತಿಳಿಹಾಸ್ಯ ಮನೆ ಮನೆ ಬೆಳಗಲಿ.

ಕೊರವಂಜಿ ಅಪರಂಜಿ ಟ್ರಸ್ಟ್ ಜೊತೆ ನೀವೂ
ಕೈ ಜೋಡಿಸಿ ಎಂದು ವಿನಂತಿ.

# ಜಿರಲೆ ಥೆರಪಿ

**- ಗಣೇಶ ಹೆಗ್ಗಡೆ**

**ಮೊ**ನ್ನೆ ರವಿವಾರ ಯಾವ ಮದುವೆ, ಮುಂಜಿ, ಚೌಲಗಳ ಕಾಟವಿಲ್ಲದೆ ಖುಷಿಯಿಂದ ಎದ್ದು ಪ್ರಾತಃರ್ವಿಧಿಗಳನ್ನು ತೀರಿಸಿ ಭಾರ್ಯೆ ಪದ್ದಿಗೆ ಸರ್‌ಪ್ರೈಸ್ ನೀಡುವ ತವಕದಿಂದ, ನಾನೇ ಎರಡು ಕಪ್ ಕಾಫಿ ತಯಾರಿಸಿ ಇನ್ನೂ ಮಲಗೇ ಇದ್ದ ಪದ್ದಿಯ ಮುಂದೆ ನಿಂತು,

''ಲೇ.. ಎದ್ದೇಳೇ ಮೇಲೆ'' ಎಂದೆ.

**ದೇಹದೊಳಗೆ ಸೇರಿದ್ದ ಪ್ರೇತಾತ್ಮಗಳನ್ನು ಓಡಿಸಲು ಜಿರಳೆಗಳೇ ಸಾಕಾಯಿತು!**

ಮೆಲ್ಲಗೆ ಕಣ್ಣು ಬಿಟ್ಟ ಪದ್ದಿ ಮೇಲೇಳಲು ಪ್ರಯತ್ನಿಸಿ ನರಳುವ ಧ್ವನಿಯಲ್ಲಿ ''ರ್‍ರೀ.. ಯಾಕೋ ಮೇಲೇಳಲು ಆಗ್ತಾನೆ ಇಲ್ಲ. ಸೊಂಟ ಹಿಡಿದು ಬಿಟ್ಟಿದೆ ಅನ್ಸುತ್ತೆ'' ಎಂದಳು.

ಅನುಮಾನಗೊಂಡ ನಾನು ''ಲೇ.. ಅವತ್ನಿಂದ ಬಡ್ಕೋತಿದ್ದೆ, ತಿಂಡಿ ಮಾಡುವ ಸೋಮಾರಿತನಕ್ಕೆ ಆಲ್‌ಮೋಸ್ಟ್ ಪ್ರತಿದಿನ ಮ್ಯಾಗಿ ಮಾಡ್ಕೊಂಡು ತಿನ್ತಿದ್ದೆ. ಡಯಾಬಿಟೀಸ್ ಇರುವ ನೀನು ಪ್ರತಿದಿನ ಲಡ್ಡು ತಿನ್ತಿದ್ದರೂ ಪರವಾಗಿರಲಿಲ್ಲ, ಹಾಳಾದ್ದು ಲೆಡ್ಡು ತಿಂದೂ ತಿಂದೂ ಈ ದುಃಸ್ಥಿತಿ ತಂದ್ಕೊಂಡ್ಯಲ್ಲೇ?''

''ರ್‍ರೀ.. ಹುಚ್ಚು ಹುಚ್ಚಾಗಿ ಮಾತ್ನಾಡ್ಬೇಡಿ. ನನ್ನೊಜ್ತೆ ಪ್ರತಿ ದಿನವೂ ತಾವೂ ತಿನ್ತಿರಲಿಲ್ವೆ? ತಮಗ್ಯಾಕೆ ಏನು ಆಗಿಲ್ಲ?''

ಅವಳ ತರ್ಕವೂ ಸರಿ ಇರಬಹುದೆನಿಸುವ ಹೊತ್ತಿಗೆ ಮೊಬೈಲು ಒಂದೇ ಸಮನೆ ರಿಂಗಾಗುತ್ತಿರುವ ಅನುಭವವಾಗಿ ಹಾಲ್‌ಗೆ ದೌಡಾಯಿಸಿದೆ. ಆ ಕಡೆಯಿಂದ ಮೊಮ್ಮಗಳು ಪಮ್ಮಿ ''ಏನ್ ತಾತ ಫೋನ್ ಎತ್ತುವುದಕ್ಕೆ ಅದೆಷ್ಟು ಹೊತ್ತು ಮಾಡ್ತಿದ್ದೀರಿ?'' ಎಂದು ಆಕ್ಷೇಪಿಸಿದಳು.

''ತಾಳಮ್ಮ. ಇಷ್ಟು ಹೊತ್ತು ನಿಮ್ಮಜ್ಜೀನ ಹಾಸಿಗೆಯಿಂದ ಮೇಲೆತ್ತಲು ಪ್ರಯತ್ನಿಸುತ್ತಿದ್ದೆ. ಇನ್ನು ಫೋನ್ ಎಲ್ಲಿಂದ ಎತ್ತಲಿ?''

''ಯಾಕ್ ತಾತ? ಅಜ್ಜೀಗೆ ಏನಾಯ್ತು?'' ಗಾಬರಿಯಿಂದ ಕೇಳಿದಳು.

''ಏನಿಲ್ಲ ಮಗು, ಸೊಂಟ ಹಿಡ್ಕೊಂಡಿದೆ ಅನ್ತಿದ್ದಾಳೆ. ಇಲ್ಲೇ ನಮ್ಮ ಮುಂದಿನ ಬೀದಿಯಲ್ಲಿ ಪ್ರಸಿದ್ಧ ಆರ್ಥೋಪೆಡಿಕ್ ಸರ್ಜನ್ ಇದ್ದಾರೆ. ಅವರನ್ನು ಕಾಂಟ್ಯಾಕ್ಟ್ ಮಾಡ್ತೀನಿ. ಅಂದಹಾಗೆ, ಅದೇನು ಬೆಳ್ಳಂಬೆಳಗ್ಗೆ ನಿನ್ನ ಫೋನ್?''

''ತಾತ ನಿಮ್ಗೊಂದು ಗುಡ್ ಮತ್ತು ಬ್ಯಾಡ್ ನ್ಯೂಸ್. ಪಿ.ಯು.ಸಿ. ಮಂಡಳಿಯವರು ಪ್ರಕಟಿಸಿದ ಸಿ.ಇ.ಟಿ. ಫಲಿತಾಂಶದಲ್ಲಿ ನನಗೆ ಐವತ್ತನೆಯ ರ್‍ಯಾಂಕ್ ಬಂದಿದೆ. ಆದರೆ, ಇದು ಗೊಂದಲದ ಪಟ್ಟಿಯಂತೆ. ನೆನ್ನೆ ಡ್ಯಾಡಿ, ಮಮ್ಮಿ ಮಲ್ಲೇಶ್ವರದ ಕಛೇರಿಯಲ್ಲಿ ವಿಚಾರಿಸಿದಾಗ

ನನ್ನ ರ್‍ಯಾಂಕ್ ಐವತ್ತರಿಂದ ಐದು ಸಾವಿರದವರೆಗೆ 'ವೇರಿ' ಆಗಬಹುದು ಎಂದು ಸಮಜಾಯಿಷಿ ನೀಡಿ ಮತ್ತಷ್ಟು ಗೊಂದಲ ಹೆಚ್ಚಿಸಿದ್ದಾರೆ. ಟಿ.ವಿ. ಸೀರಿಯಲ್‌ಗಳ ತರಹ ನನ್ನ ತಲೆ ಗೊಂದಲದ ಗೂಡಾಗಿ ಹೋಗಿದೆ. ಪ್ರತಿ ದಿನವೂ ನಿಮ್ಗೆ ಫೋನ್ ಮಾಡಿ ರ್‍ಯಾಂಕ್ ಪಟ್ಟೀನ ಅಪ್‌ಡೇಟು ಮಾಡ್ತೀನಿ.''

''ರ್‍ರೀ.. ಯಾರದ್ರೀ ಫೋನು?'' ಎಂದು ರೂಮಿನಿಂದ ಪದ್ದಿ ಯಾತನೆಯಿಂದ ಗೊಣಗಿದಾಗಲೇ ನಾನು ವಾಸ್ತವಕ್ಕೆ ಬಂದಿದ್ದು. ಪಕ್ಕದ ಬೀದಿಯ ಆರ್ಥೋಪೆಡಿಕ್ ಸರ್ಜನ್ ಡಾ|| ಬಾಳೂರಾಯರಿಗೆ ಫೋನಾಯಿಸಿದೆ.

ಆ ಕಡೆಯ ರಿಸೀವರ್‍ರಿನಿಂದ ''ಹರ್‍ರಿ ಹೋಮ್'' ಎಂಬ ಗೊಗ್ಗರ ದನಿ ಕೇಳಿಸಿತು. ತತ್‌ಕ್ಷಣ ಫೋನ್ ಕಟ್ ಮಾಡಿದವನೆ, ಪದ್ದಿಗೆ ವಿಷಯ ತಿಳಿಸಿ, ಮನೆಯ ಮುಂಬಾಗಿಲಿಗೆ ಬೀಗ ಜಡಿದು, ಡಾಕ್ಟರರ ಮನೆಯತ್ತ ದೌಡಾಯಿಸಿದೆ. ವರಾಂಡದಲ್ಲಿ ಕಾವಿ ಪಂಚೆ ತೊಟ್ಟು, ಅರ್ಧ ತೋಳಿನ ಕಾಟನ್ ನಿಲುವಂಗಿ ತೊಟ್ಟು, ಹಣೆಗೆ ವಿಭೂತಿ ಹಾಗೂ ಕುಂಕುಮ ಜಡಿದು, ಹಸ್ತದಲ್ಲಿ 'ಛೀ' ಚಾನಲ್‌ನವರು ನಡೆಸಿಕೊಡುವ 'ವಗ್ಗರಣೆ ಸುಬ್ಬಿ' ಸೀರಿಯಲ್‌ನವರು ಹೊರತಂದಿರುವ ಅಡುಗೆ ಪುಸ್ತಕವನ್ನು ಓದುತ್ತಾ ಕುಳಿತಿದ್ದ ವ್ಯಕ್ತಿಯತ್ತ ಕೈ ಮುಗಿದು ''ಡಾಕ್ಟರ್ ಒಳಗಿದ್ದಾರೆಯೆ?'' ಎಂದು ಸಂಶಯದಿಂದ ಕೇಳಿದೆ.

''ನಾನೇ ಕಣ್ರಿ ಡಾಕ್ಟ್ರು'' ಎಂಬುತ್ತರ ಕೇಳಿ ಬೆಚ್ಚಿ ಬಿದ್ದೆ.

''ತಾವೇನೊ, ಐದು ನಿಮಿಷದ ಹಿಂದೆ ಫೋನಿನಲ್ಲಿ ಮಾತ್ನಾಡಿದ್ದು?''

''ಹೌದು ಸರ್.''

''ಮತ್ತ್ಯಾಕೆ ಹಾಗೆ ಸಡನ್ನಾಗಿ ಫೋನ್ ಕಟ್ಮಾಡಿದ್ರಿ?''

''ಯಾರೋ ''ಹರ್‍ರಿ ಹೋಮ್'' ಎಂದು ಆಜ್ಞಾಪಿಸಿದಾಗಾಯ್ತು. ತಾವು ಮನೆಗೇ ಇನ್ವೈಟ್ ಮಾಡ್ತಿದ್ದಾರೆ ಎಂದು ಗ್ರಹಿಸಿ, ಸಡನ್ನಾಗಿ ಹೀಗೆ ಓಡಿ ಬಂದೆ.''

''ಛೇ.. ಛೇ.. ಇಲ್ಲಿ ಭಾಷಾ ಗೊಂದಲವಾಗಿದೆ. ನಾನು ಫೋನಿನಲ್ಲಿ ಹೇಳಿದ್ದು ವಾಡಿಕೆಯಂತೆ 'ಹರಿ ಓಂ' ಅಂತ. ಹೋಗ್ಲಿ ಬಿಡಿ. ಅಂದಹಾಗೆ ತಮ್ಮದೇನು ಸಮಸ್ಯೆ?''

''ಸರ್, ಸಮಸ್ಯೆ ನನ್ನದಲ್ಲ, ನನ್ನ ಹೆಂಡ್ತಿದು. ರಾತ್ರೆ ಮಲಗಿದ್ದಾಗ ಚೆನ್ನಾಗೇ ಇದ್ದಳು. ಆದರೆ ಬೆಳಿಗ್ಗೆ ಎಬ್ಬಿಸಲು ಹೊರಟರೆ ಮೇಲೇಳಲು ಅವಳಿಗೆ ಸಾಧ್ಯವೇ ಆಗುತ್ತಿಲ್ಲ. ಸೊಂಟ ಹಿಡಿದು ಬಿಟ್ಟಿದೆ. ಮೈಯೊಳಗೆ ಅದ್ಯಾರೋ ಕಿವುಚಿದ ಅನುಭವವಾಗ್ತಿದೆ ಅನ್ತಿದ್ದಾಳೆ. ಏನೋ ಆರ್ಥೋಪೆಡಿಕ್ ಪ್ರಾಬ್ಲಂ ಇರ್ಬೇಕು.''

''ಇವತ್ತು ಅಮವಾಸ್ಯೆ ಅಲ್ವೇನ್ರೀ?''

''ಹೌದು ಸರ್.''

''ನಿಮ್ಮವರು ಇತ್ತೀಚೆಗೆ ಯಾವುದಾದರೂ ಹುಣಸೇಮರದ ಕೆಳಗೆ ನಿಂತಿದ್ರೇ?''

''ಕರೆಕ್ಟ್ ಸರ್. ಪ್ರತಿದಿನ ಬೆಳಗ್ಗೆ ನನ್ನ ಶ್ರೀಮತಿಯವರೆ ಬೀದಿಯ ಮೂಲೆಯ ಹುಣಸೇ ಮರದ ಕೆಳಗಿರುವ ಹಾಲಿನ ಬೂತಿನಿಂದ ಹಾಲು ತರೋದು.''

''ನೋಡಿದ್ರಾ, ನನ್ನ ಊಹೆ ನಿಜವಾಯ್ತು ಬಿಡಿ.''

''ಅಂದರೆ?''

''ನಿಮ್ಮಂಥ ಹುಲು ಮಾನವರ ಕಣ್ಣಿಗೆ ಅದು ನಂದಿನಿ ಹಾಲಿನ ಬೂತ್, ಆದರೆ ನಮ್ಮಂತಹ ಸಾಧಕರ ಕಣ್ಣಿಗೆ ಅದು ನಂದಿನಿ ಭೂತ!''

''ವ್ಹಾಟ್? ತಾವು ದಿಟವಾಗ್ಲು ಆರ್ಥೋಪೆಡಿಕ್ಸ್ ವೈದ್ಯರು ತಾನೆ?''

''ನಿಸ್ಸಂಶಯವಾಗಿ. ತಮಗ್ಯಾಕೆ ಈ ಕೆಟ್ಟ ಡೌಟು? ಒಂದು ಕಾಲದಲ್ಲಿ ನನಗೆ ಸರಿಯಾಗಿ ಪ್ರಾಕ್ಟೀಸೇ ಇಲ್ಲದೆ, ಪೇಷಂಟುಗಳೇ ಇಲ್ಲದೆ ಮನೆ ನಿಭಾಯಿಸುವುದಕ್ಕೆ ತುಂಬಾ ಕಷ್ಟವಾಗಿ ಹೋಗಿತ್ತು. ಆ ಸಂಕಷ್ಟದ ದಿನಗಳಲ್ಲಿ 'ಛೀ' ಚಾನಲ್ಲಿನಲ್ಲಿರುವವರು ಅವರ 'ವಗ್ಗರಣೆ ಸುಬ್ಬಿ' ಎಂಬ ಪ್ರಸಿದ್ಧ ಕಾರ್ಯಕ್ರಮದಲ್ಲಿ ಚೆನ್ನಾಗಿ ಅಡುಗೆಯೂ ಬಲ್ಲ ನನಗೆ ಭಾಗವಹಿಸುವ ಅವಕಾಶವನ್ನು ಮಾಡಿಕೊಟ್ಟರು. ಈ ಕಾರ್ಯಕ್ರಮ ನನ್ನ ವೈದ್ಯ ವೃತ್ತಿಯ ಮುಂದುವರಿಕೆಗೂ ತುಂಬಾ ನೆರವಾಯ್ತು. ನನ್ನ ಶ್ರೋತೃಗಳ ಬಳಗವೇ ಸುಮಾರು ಹತ್ತು ಸಾವಿರ ದಾಟಿದೆ.''

''ಈಗ ನನ್ಗೆ ಕಾನ್ಫಿಡೆನ್ಸ್ ಬಂತು ಸಾರ್. ಈಗ ನನ್ನ ಮುಂದಿನ ದಾರಿ?''

''ಯಾವುದಕ್ಕೂ ತಾವು ಧೃತಿಗೆಡಬೇಡಿ. ನಿಮ್ಮ ಶ್ರೀಮತಿಯವರ ದೇಹದೊಳಗೆ ಪ್ರೇತಾತ್ಮಗಳ ಪ್ರವೇಶವಾಗಿ ಹೀಗೆಲ್ಲಾ ರಂಪಾಟವಾಗುತ್ತಿದೆ.''

''ಸರ್, ನನ್ನೊಂದು ಅನುಮಾನ. ನನ್ನ ಶ್ರೀಮತಿಯವರ ಜತೆಗೆ ನೂರಾರು ಜನ ಆ ಹಾಲಿನ ಬೂತಿನಿಂದ ಹಾಲು ತೆಗೆದುಕೊಂಡು ಹೋಗುತ್ತಾರೆ. ತಮ್ಮನ್ನೂ ಅನೇಕ ಸಲ ಆ ಹುಣಸೆಯ ಮರದ ಹತ್ತಿರ ನೋಡಿದ್ದೇನೆ. ಆದರೆ, ಯಾರಿಗೆ ಏನೂ ಆಗದೆ ನನ್ನ ಶ್ರೀಮತಿಯವರಿಗೆ ಏಕೆ ಹೀಗಾಯ್ತು?''

''ತಾವು ಮೊದಲು ನನ್ನಲ್ಲಿ ನಂಬಿಕೆ ಇಡಬೇಕು. ಇವೆಲ್ಲಾ ಪೂರ್ವ ಜನ್ಮಾಂತರದ ಕರ್ಮ ಫಲಗಳು. ನಾಳೆ ಬೆಳಗ್ಗೆ ಸರಿಯಾಗಿ ಹತ್ತಕ್ಕೆ ನಿಮ್ಮ ಶ್ರೀಮತಿಯವರನ್ನು ನನ್ನ ಕ್ಲಿನಿಕ್ಕಿಗೆ ಕರೆ ತನ್ನಿ, ಹಿಪ್ನಟೈಸು ಮಾಡಿ ಪ್ರೇತಭಾದೆಯಿಂದ ಅವರನ್ನು ವಿಮುಕ್ತಿಗೊಳಿಸುತ್ತೇನೆ. ಸಹಾಯಕ್ಕೆ ನಾಲ್ಕು ಜನ ಇದ್ದರೆ ಒಳಿತು.''

''ಸರ್, ಚಾರ್ಜು ಎಷ್ಟಾಗುತ್ತೆ? ಎಂದು ಸಂಕೋಚದಿಂದಲೆ ಕೇಳಿದೆ.''

''ನನ್ನ ಫೀಸು ಒಂದು ಪ್ರೇತಕ್ಕೆ ಒಂದು ಸಾವಿರ ರೂ. ಒಟ್ಟು ಖರ್ಚು, ದೇಹದಲ್ಲಿರೊ ಪ್ರೇತಗಳ ಸಂಖ್ಯೆ ಮೇಲೆ ಡಿಪೆಂಡ್ ಆಗುತ್ತೆ. ಮರಿ ಪ್ರೇತಗಳಿದ್ದರೆ ತಮಗೆ ಖಂಡಿತ ಡಿಸ್ಕೌಂಟು ಸಿಗುತ್ತೆ.''

ಒಂದು ಕ್ಷಣ ನನ್ನ ಕಣ್ಣು ಕತ್ತಲೆಗಿಟ್ಟುಕೊಂಡಿತು. ಸಾವರಿಸಿಕೊಂಡು ಕಣ್ಣು ಬಿಟ್ಟ ಮೇಲೆ, ಎದುರು ನಿಂತಿರುವ ನಮ್ಮೂರಿನ ಪ್ರಸಿದ್ಧ ವೈದ್ಯರು ಮಾನಸಿಕವಾಗಿ ಅದೆಷ್ಟು ಎತ್ತರ

ಬೆಳೆದಿದ್ದಾರೆ ಎಂದೆನಿಸಿ ಅವರ ಬಗ್ಗೆ ಮತ್ತು ನಮ್ಮೂರಿನ ಬಗ್ಗೆ ತುಂಬಾ ಹೆಮ್ಮೆಯೆನಿಸಿತು.

ಡಾ|| ಬಾಳೂರಾಯರು ವೈದ್ಯೋ ನಾರಾಯಣೋ ಹರಿಯ ರೂಪದಲ್ಲಿ ನನ್ನೆದುರು ನಿಂತಿದ್ದಾಗ ನಾನು ಮಧ್ಯಮ ವರ್ಗದ ಬಡ ವಾಮನನೆಂಬಂತೆ ಭಾಸವಾಯ್ತು. ವಿನಮ್ರ ಭಾವದಿಂದ ಕೈ ಜೋಡಿಸಿದೆ.

''ಹರಿ ಓಂ'' ಎಂದರು ಡಾ|| ಬಾಳೂರಾಯರು. ನಾನು ಪದ್ದಿಯ ಅಸಹಾಯಕತೆ ನೆನೆದು ''ಹರ್ರಿ ಹೋಮ್'' ಎಂದು ಮನೆಯ ಕಡೆ ಓಟಕಿತ್ತೆ.

ನಾನು ಮನೆಯ ಬಾಗಿಲಿನ ಬೀಗ ತೆಗೆದು ಪದ್ದಿಯು ಮಲಗಿದ್ದ ಕೋಣೆಗೆ ಹೋದಾಗ ಪದ್ದಿ ನಾಪತ್ತೆಯಾಗಿ ಹೋಗಿದ್ದಳು. ಪ್ರೇತಾತ್ಮಗಳು ಇವಳನ್ನು ಎಲ್ಲಾದ್ರು ಹೊತ್ಕೊಂಡು ಹೋಗಿದ್ದಾವೆಯೆ ಎಂಬ ಕೆಟ್ಟ ಯೋಚನೆ ಬಂದು ''ಅಯ್ಯೋ ಪದ್ದೀ..'' ಎಂದು ಗಟ್ಟಿಯಾಗಿ ಕಿರುಚಿದೆ.

ಅಡುಗೆ ಕೋಣೆಯಿಂದ ಹೆಚ್ಚೂ ಕಮ್ಮಿ ಓಡಿಯೇ ಬಂದ ಪದ್ದಿ ''ಯಾಕ್ರೀ? ಏನಾಯ್ತೂರಿ? ಹೀಗ್ಯಾಕೆ ಬೆವತ್ಕೊತ್ತಾಯಿದ್ದೀರಿ'' ಎಂದಳು.

''ಅಲ್ಲಾ ಕಣೆ ನೀನು ಹ್ಯಾಗೆ ಮೇಲಕ್ಕೆ ಎದ್ದೆ? ಈಗ ಹ್ಯಾಗೆ ಓಡಾಡ್ತಿದ್ದೀ?'' ಎಂದೆ ಭಯ ವಿಹ್ವಲಗೊಂಡು.

''ರ್ರೀ ಅದಾ.. ನೀವು ಹೋದ ಸ್ವಲ್ಪ ಹೊತ್ತಿನಲ್ಲೇ ಎಂಥಹ ಪ್ರಮಾದವಾಯ್ತೂಂತ. ಒಂದು ಹಾರುವ ಜಿರಲೆ ನನ್ನ ಸೊಂಟದ ಮೇಲೆ ಬಂದು ಕುಳಿತುಕೊಂಡ್ತು. ಕೈ ಕಾಲು ಝಾಡಿಸಿ, ಕೊಡವಿಕೊಂಡು ಮೇಲಕ್ಕೆ ಎದ್ದವಳೆ ಭಯದಿಂದ ಆಚೆಗೆ ಓಡಿ ಹೋದೆ. ಈಗ ನನ್ಗೆ ಯಾವ ನೋವೂ ಇಲ್ಲಾರಿ. ಸಲೀಸಾಗಿ ಓಡಾಡ್ತಿದ್ದೀನಿ. 'ಲಕ್ಷ್ಮಣ ರೇಖೆ' ತಂದು ಮನೇಲಿರೊ ಜಿರಲೆಗಳನ್ನೆಲ್ಲಾ ಸಾಯಿಸಬೇಕೂರಿ'' ಎಂದಳು.

''ಛೇ.. ಛೇ.. ಇಂಥಹ ಪರೋಪಕಾರಿ ಜಿರಲೆಯನ್ನು ನಾನು ಕೊಲ್ಲುವುದುಂಟೇ? 'ಮೇ ದೇರ್ ಟ್ರೈಬ್ ಇನ್‌ಕ್ರೀಸ್!' ಎಂದು ಉತ್ತರಿಸಿ, ಡಾಕ್ಟರ ಮನೆಯಲ್ಲಿ ನನಗಾದ ಅನುಭವವನ್ನು ಅವಳೊಂದಿಗೆ ಹಂಚಿಕೊಂಡೆ.''

ಎಲ್ಲಾ ವಿವರವಾಗಿ ಕೇಳಿದ ಪದ್ದಿ ಪಕ ಪಕನೆ ನಗಲಾರಂಭಿಸಿದಳು.

''ಅಯ್ಯೋ ಮಾರಾಯ್ತಿ. ಮತ್ತೆ ನಗ್ಬೇಡ. ನಿನ್ ಸೊಂಟ ಮತ್ತೆ ಹಿಡ್ಕೊಂಡೀತು'' ಎಂದು ಅವಳನ್ನು ಎಚ್ಚರಿಸಿದೆ.

ನಮ್ಮೂರ ವೈದ್ಯರ 'ಪ್ರೇತ ಥೆರಪಿ'ಗಿಂತ ಈ 'ಜಿರಲೆ ಥೆರಪಿ'ಯೇ ಎಂತಹ ಶಮನಕಾರಿ ಎಂದಭಿಪ್ರಾಯಪಟ್ಟಳು 'ಪದ್ದಿ'. ನನಗೂ ಅದು ದಿಟವೆನಿಸಿತು.

✺

# ದುಬೈ ಆಫೀಸಿನಲ್ಲಿ ಹಾಸ್ಯದ ಫ(ಗು)ಳಿಗೆಗಳು

**- ಆರತಿ ಘಟಿಕಾರ್**

ನನ್ನ ಪತಿ ದುಬೈ ನಗರಿಗೆ ವಲಸೆ ಹೋದ ಬಳಿಕ ಒಂದು ವರ್ಷದ ನಂತರ ನಾನೂ ನನ್ನ ಬೃಹತ್ ಲಗೇಜ್ ಹಾಗೂ ನನ್ನ ಎರಡು ಪುಟ್ಟ ಲಗೇಜ್ (ಮಕ್ಕಳು) ನೊಂದಿಗೆ ದುಬೈ ನಗರಿ ಮುಟ್ಟಿದೆ.

ಚಂದದ ದುಬೈ ನಿಜಕ್ಕೂ ಬೆರಗು ಮೂಡಿಸುವಂತಹ ಊರು. ಇಲ್ಲಿನ ವಿಶ್ವ ದರ್ಜೆಯ ಮೂಲಭೂತ ಸೌಕರ್ಯಗಳು, ಆಧುನಿಕ ಶಾಪಿಂಗ್ ಮಾಲ್‌ಗಳು, ಮನಮೋಹಕ ಗಗನ ಚುಂಬಿಗಳು, ಆಕರ್ಷಕ ಪ್ರೇಕ್ಷಣೀಯ ಸ್ಥಳಗಳು ಹೀಗೆ... ಎಲ್ಲವನ್ನು ಕಣ್ದಣಿಯ ನೋಡುತ್ತಾ, ಅಲ್ಲಿನ ಸ್ನೇಹಪರ ವಾತಾವರಣ ಇಷ್ಟವಾಗತೊಡಗಿತು.

ಹೊಸ ಊರಿಗೆ ಕ್ರಮೇಣ ಹೊಂದುಕೊಂಡು ನನ್ನ ಬಿಡುವಿನ ವೇಳೆ ಕಳೆಯಲು ನಾನು ನೌಕರಿಯ ಯತ್ನ ಮಾಡಿದಾಗ, ಒಳ್ಳೆಯ ಸೂಕ್ತವಾದ ಕಂಪನಿ ಒಂದನ್ನ ಹುಡುಕುವುದರಲ್ಲಿ ಯಶಸ್ವಿ ಆದೆ.

ಮೂಲತಹ ಇದು ಅರಬ್ ಕಂಪನಿ. (ಬ್ರ್ಯಾಂಚ್ ಆಫೀಸು) ಇನ್ನು ನನ್ನ ಕಚೇರಿಯ ಬಗ್ಗೆ ಹೇಳುವುದಾದರೆ, ಅಲ್ಲಿ ಎಲ್ಲರೂ ಅರಬ ಮೂಲದವರು, ಕೆಲವರು ಬ್ರಿಟಿಷರಿದ್ದರು. ಇನ್ನು ಬಹುಪಾಲು ಸಹೋದ್ಯೋಗಿಗಳು ಇಸ್ಲಾಂ ಧರ್ಮದವರು. ನಾನು ಹಾಗೂ ಇನ್ನೊಬ್ಬರು ಮಲಯಾಳಿ, ಹುಸ್ಸೈನ್ ಎಂಬುವವರು. ನಾವಿಬ್ಬರೇ ಅಲ್ಲಿದ್ದ ಭಾರತೀಯರು... ಅದರಲ್ಲಿ ನಾನೊಬ್ಬಳೆ ಹಿಂದೂ. ಸಾಮಾನ್ಯವಾಗಿ ಅರಬರು ಎಲ್ಲಾ ಭಾರತೀಯ ಮೂಲದವರನ್ನ ಅಲ್‌ಹಿಂದ್ ಅಂದು ಕರೆಯುತ್ತಾರೆ! ಮೊದಮೊದಲು ನಾನು ಅದನ್ನು ಕನ್ನಡೀಕರಿಸಿ ಕೊಂಚ ಗಲಿಬಿಲಿ ಗೊಂಡಿದ್ದೂ ಉಂಟು. ಅಂತೂ ಹೊಸ ಕಚೇರಿ ಅನಾಯಾಸವಾಗಿ ಒಗ್ಗಿತು, ಅಲ್ಲಿ ಎಲ್ಲರೂ ಬಹಳ ಸ್ನೇಹಪರರಾಗಿದ್ದ ಕಾರಣ ಕಚೇರಿಯ ವಾತಾವರಣ ಕ್ರಮೇಣ ಇಷ್ಟವಾಗತೊಡಗಿತು.

ನಮ್ಮ ಕಂಪನಿಯ ಮುಖ್ಯಸ್ಥರು ಲೋಕಲ್ಲು, ಅರ್ಥಾತ್ ಸಂಯುಕ್ತ ಅರಬ್ ಸಂಸ್ಥಾನದವರೇ. ಆಗರ್ಭ ಶ್ರೀಮಂತ ಶೇಕ್. ಆರಡಿಗಿಂತಲೂ ಎತ್ತರದ ಅಜಾನುಬಾಹು ವ್ಯಕ್ತಿ. ಇನ್ನು ಅವರ ಹೆಸರೂ ಕೂಡ ಅವರಷ್ಟೇ ಉದ್ದ, ಹೀಗಾಗಿ ನಾನು ಅವರ ರೈಲ್ವೆ ಬೋಗಿಯಂತಹ ಹೆಸರಿನಲ್ಲಿ ಕೊನೆಯ ಒಂದು ಹೆಸರನ್ನು ಮಾತ್ರ ನೆನಪಿಟ್ಟುಕೊಂಡಿದ್ದೆ! ಸದಾ ಅವರು ಹಾಲ್ಬಿಳುಪಿನ ಅರಬ್ ಪೋಷಾಕ್ ಆದ ಕಂದೂರಾ ಧರಿಸಿ ಗಂಭೀರವಾಗಿ ಗತ್ತಿನಿಂದ ನಡೆದು ಕಚೇರಿಯೊಳಗೆ ಬರುತ್ತಿದ್ದರು! ನಿತ್ಯವೂ ಅವರನ್ನು ಆ ದಿರಸಿನಲ್ಲೇ ಕಂಡ ನನಗೆ ಅಪರೂಪಕ್ಕೆ ಪ್ಯಾಂಟ್ ಶರ್ಟಿನಲ್ಲಿ ಬಂದಾಗ ನಾನವರ ಗುರುತು ಹಿಡಿಯದೆ ಯಾರೋ ಅಂದುಕೊಂಡು ಶುಭೋದಯಾ ಕೂಡ ತಿಳಿಸದೆ ಸುಮ್ಮನಾಗಿದ್ದೆ, ಇನ್ನು, ಅವರು

ಬರುವಿಕೆಯ ಮುನ್ಸೂಚನೆ ಕೊಡುತ್ತಿದ್ದದ್ದು ಅವರು ಹಾಕುತ್ತಿದ್ದ ಸೆಂಟಿನ ಘಮ ಘಮಿಸುವ ಪರಿಮಳ. ಅದು ಅವರಿಗಿಂತಲೂ ಮುಂಚೆ ನಮ್ಮ ಮೂಗಿಗೆ ಎಂಟ್ರಿ ಕೊಟ್ಟು ನಮ್ಮನ್ನೂ ಒಂದು ಕ್ಷಣ ಆ ಪರಿಮಳದ ಗುಂಗಿನಲ್ಲಿ ತೇಲಾಡಿಸುತ್ತಿತ್ತು. ಸದ್ಯ ನಾವುಗಳು ಅದೇ ಸ್ಥಿತಿಯಲ್ಲಿರದೆ ಎಚ್ಚೆತ್ತುಕೊಂಡು ಮರುಕ್ಷಣವೇ ಜಾಗ್ರತರಾಗುತ್ತಿದ್ದೆವು. ಅರಬ ಶೇಖ್ ಎಂದ ಮೇಲೆ ಕೇಳಬೇಕೆ? ಅವರ ಮಗನ ಹುಟ್ಟು ಹಬ್ಬದ ಔತಣ ಕೂಟಕ್ಕೆ ಬಂದ ಮಕ್ಕಳಿಗೆಲ್ಲ ಬೆಲೆ ಬಾಳುವ ಆಟಿಕೆಗಳನ್ನು ಉಡುಗೊರೆಯಾಗಿ ಕೊಟ್ಟಿದ್ದು ಹೆಚ್ಚುಗಾರಿಕೆಯಲ್ಲ ಬಿಡಿ, ಆದರೆ ಅದರೊಂದಿಗೆ ಎಲ್ಲ ಮಕ್ಕಳಿಗೂ ಒಂದೊಂದು ಚಿನ್ನದ ಚೈನು ಕೂಡ ಕೊಟ್ಟಿದ್ದರು ಎಂದು ಒಮ್ಮೆ ನನ್ನ ಅರಬ್ ಸ್ನೇಹಿತರು ಹೇಳಿದಾಗ ನಾನು ಕಣ್ಣರಳಿಸಿ ಆಶ್ಚರ್ಯಪಟ್ಟಿದ್ದೆ.

ಅವರ ಗಾಂಭೀರ್ಯ ತುಂಬಿದ ನಡೆ/ನುಡಿಗಳು ನಮ್ಮೆಲ್ಲರಲ್ಲೂ ಅವರ ಬಗ್ಗೆ ಹೆಚ್ಚಿನ ಗೌರವ ಭಾವನೆಗಳನ್ನು ಮೂಡಿಸುತ್ತಿತ್ತು. ಆದರೆ ಅವರು ಹೀಗೆ ಗಂಭೀರವಾಗಿ ನಡೆದುಕೊಂಡು ಕಚೇರಿಗೆ ಬರುತ್ತಿದ್ದದ್ದು ಬರೀ ವಾರಕ್ಕೆರಡು ಅಥವಾ ಮೂರು ದಿನಗಳಷ್ಟೇ. ಏನಾದರೂ ಮೀಟಿಂಗು ಇದ್ದಾಗ, ಇಲ್ಲವೇ ಯಾವುದಾದರೂ ಕೆಲವು ಮುಖ್ಯ ಪತ್ರಗಳಿಗೆ ಸಹಿ ಮಾಡಬೇಕಿದ್ದಾಗ ಮಾತ್ರ.

ಇನ್ನೂ ನಮ್ಮ ಪ್ರಾಜೆಕ್ಟ್ ಮ್ಯಾನೇಜರ್ ಮೂಲತಹ ಲೆಬಿನಾನ್ ದೇಶದವರು. ನನ್ನೊಂದಿಗೆ ಅವರದು ಬಹಳ ಆತ್ಮೀಯ ಹಾಗೂ ಸ್ನೇಹಪರವಾದ ಮಾತು. ನನ್ನನ್ನು ಸಂಬೋಧಿಸುವಾಗಲೆಲ್ಲಾ ಅವರು ಹಲೋ ಅರ್ರಾ.....ತೀ ಎಂದು ರಾ ಅಕ್ಷರವನ್ನು ರಬ್ಬರ್ ಬ್ಯಾಂಡಿನಂತೆ ಎಷ್ಟು ದೀರ್ಘವಾಗಿ ಎಳೆಯುತ್ತಿದ್ದರು ಅಂದರೆ... ಅದೇ ಸಮಯದಲ್ಲಿ ಒಂದು ಲಾಡು ಆರಾಮವಾಗಿ ಅವರ ಬಾಯಲ್ಲಿ ಹಾಕಬಹುದು ಅಷ್ಟು! ನಮ್ಮ ಭಾರತದ ಸಂಸ್ಕೃತಿ, ಆಚಾರ-ವಿಚಾರಗಳನ್ನು ತಿಳಿದುಕೊಳ್ಳುವುದರಲ್ಲಿ ಅವರಿಗೆ ಬಹಳ ಆಸಕ್ತಿ. ಒಟ್ಟಿನಲ್ಲಿ ಹೇಳುವುದಾದರೆ ಬಹಳ ಸ್ವಾರಸ್ಯಕರವಾದ ವ್ಯಕ್ತಿ. ಅರಬ್ಬರೊಂದಿಗೆ ನಮ್ಮ ಭಾರತೀಯ ಹೆಸರುಗಳನ್ನು ಹೇಳುವಾಗ ಅವುಗಳು ಸ್ಪ್ರಿಂಗಿನಂತೆ ತಿರುಚಿಕೊಂಡು ಅದನ್ನು ಕೇಳಿದಾಗ ನಿಜಕ್ಕೂ ನಗು ಉಕ್ಕಿಸುತ್ತಿತ್ತು. ಅರಬ್ ಮೂಲದ ಯಾವುದೇ ಹೆಸರುಗಳನ್ನು ನಾವು ಸಲೀಸಾಗಿ ಹೇಳಿಬಿಡಬಹುದು. ಆದರೆ ನಮ್ಮ ಹೆಸರುಗಳು ಮಾತ್ರ ಇದರ ಬಾಯಿ, ಹಲ್ಲುಗಳಲ್ಲಿ ಸಿಕ್ಕಿ ಚಿಂದಿ ಚಿತ್ರಾನ್ನ ಆಗುತ್ತಿದ್ದದ್ದು ಮಾಮೂಲು. ಅಂಜನ್ ಎನ್ನುವ ಕಾಂಟ್ರಾಕ್ಟರ್ ಆಗಾಗ ನಮ್ಮ ಕಚೇರಿಗೆ ಬರುತ್ತಿದ್ದರು. ಅವನ ಹೆಸರು ಅಜಾನ್ ಆಗಿತ್ತು. ಇನ್ನು ಅಕೌಂಟೆಂಟ್ ಅಂಜಲಿ ಮೇಡಂ ಅಜಾಲಿ ಆದರೆ ಪ್ರಶಾಂತ್ ಪಾಪ ಬರಶಾದ್ ಆಗಿದ್ದ! ಇನ್ನು ಅನಂತರಾಮನ್ ಅನದರಮ್ಯಾನ್ ಆಗಿ ಹೊಸ ನಾಮಕರಣವನ್ನೇ ಮಾಡಿಕೊಂಡಿದ್ದ! ಆದರೂ ಬಹಳ ಮಂದಿ ತಮ್ಮ ಹೊಸ ಹೆಸರಿಗೆ ಒಗ್ಗಿಕೊಂಡು ಬಿಟ್ಟಿದ್ದರು.

ನಮ್ಮ ಆಫೀಸಿನಲ್ಲಿ ಮಹಿಳಾ ಸಹೋದ್ಯೋಗಿಗಳ ಸಂಖ್ಯೆ ಕಡಿಮೆ. ಅದರಲ್ಲಿ ಒಬ್ಬ ಚೆಂದುಳ್ಳಿ ಚೆಲುವೆ, ಮೂಲತಹ ಸಿರಿಯಾ ದೇಶದವಳಾಗಿದ್ದವಳು, ನಿಜಕ್ಕೂ ದಂತದ ಬೊಂಬೆಯಂತಹ ಮೈಮಾಟ ಎಂದರೆ ತಪ್ಪಾಗಲಾರದು. ಅವಳಂತೆಯೇ ಮುದ್ದಾದ ಹೆಸರು ಅವಳದು ಸಮಾ ಎಂದು. ಇಂಟೀರಿಯರ್ ಡಿಸೈನ್ ಡಿಪಾರ್ಟ್‌ಮೆಂಟಿನಲ್ಲಿ ಅವಳ ಕೆಲಸ. ನಾವಿಬ್ಬರೂ ಆಗಾಗ ಕುಶಲೋಪರಿ ವಿನಿಮಯ ಮಾಡಿಕೊಳ್ಳುತ್ತಿದ್ದೆವು. ಅವಳು ನಾ ಕೆಲಸಕ್ಕೆ

ಸೇರಿದ ಶುರುವಿನಲ್ಲಿ ಒಮ್ಮೆ ತನ್ನ ಟಿಫನ್ ಬಾಕ್ಸಿನಲ್ಲಿದ್ದ ನಾನ್-ವೆಜ್ ಆಹಾರವನ್ನ ನನ್ನೊಂದಿಗೆ ಹಂಚಿಕೊಳ್ಳಲು ಬಂದಾಗ ನಾನು (ಅಲ್ಲಿ ನಾನೊಬ್ಬಳೇ!) ಸಸ್ಯಹಾರಿ ಅಂತ ಗೊತ್ತಾಗಿ, ಅಯ್ಯೋ ಮೀನು ಕೂಡ ತಿನ್ನಲ್ವಾ ಪಾಪ! ಅರೆ ಮೀನು ವೆಜ್ ಅಲ್ವಾ! ಎಂದು ಉದ್ಧರಿಸಿ ಬೇಜಾರು ಪಟ್ಟುಕೊಂಡಾಗ ನಾನು ನಕ್ಕು ಸಮ್ಮಾ ಮೀನು ನಿಮಗೆ ವೆಜ್ ಇರಬಹುದು. ಆದರೆ ನಮಗೆ ಅದು ನಾನ್‌ವೆಜ್ ಅಂದಾಗ ಪೆಚ್ಚನೆ ನಕ್ಕು ಬಿಟ್ಟಳು!

ಒಮ್ಮೆ ಆಕೆ ಹೋಗುತ್ತಿದ್ದ ಕ್ಲಬ್ ಒಂದರ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಅವಳು ಪಾಲ್ಗೊಳ್ಳುವ ಸಲುವಾಗಿ ಭಾರತೀಯ ಉಡುಗೆಯನ್ನು ಧರಿಸುವ ಅವಶ್ಯಕತೆ ಒದಗಿ ಬಂದಿತ್ತು. ಅವಳ ಭಾರತೀಯ ಗೆಳತಿ ನಾನೇ ಆಗಿದ್ದರಿಂದ ನನ್ನ ಬಳಿಗೆ ಬಂದು ಆರತಿ, ದಯವಿಟ್ಟು ನೀವು ಏನು ಅಂದುಕೊಳ್ಳದಿದ್ದರೆ ನಿಮ್ಮ ಯಾವುದಾದರೂ ಗ್ರ್ಯಾಂಡಾಗಿರುವ ಸ್ಯಾರಿ ನನಗೆ ಒಂದು ದಿನ ಮಟ್ಟಿಗೆ ಬಾಡಿಗೆಗೆ ಕೊಡ್ತೀರಾ? ಎಂದು ಕೇಳಿದಾಗ ನನಗೆ ನಗು. ನಾನು ಅಯ್ಯೋ ಧಾರಾಳವಾಗಿ ಕೊಡ್ತೀನಿ, ರೆಂಟು/ಬಾಡಿಗೆ ಏನೂ ಬೇಡಮ್ಮ ಭರವಸೆ ನೀಡಿದೆ. ಒಹ್ ತುಂಬಾ ಧನ್ಯವಾದಗಳು! ಹಾಗಿದ್ರೆ ಸರಿ ನಾಳೇನೆ ಕಾರ್ಯಕ್ರಮ, ನನಗೆ ನೀವೇ ಸೀರೆ ಉಡಿಸಬೇಕು ಪ್ಲೀಸ್ ಎಂದು ವಿನಂತಿಸಿ, ನನ್ನಿಂದ ಅಸ್ತು ಎನಿಸಿಕೊಂಡ ಮೇಲೆ ನಿರಾಳವಾಗಿ ಬಾಯ್ ಆರತಿ ತುಂಬಾ ಧನ್ಯವಾದಗಳು. ಮುದ್ದಾಗಿ ವಿದಾಯ ಹೇಳಿ ಹೊರನಡೆದಳು. ಸರಿ ನನ್ನ ಒಂದು ಗ್ರಾಂಡ್ ಆಗಿರುವ ಸೀರೆ ಹಿಡಿದು ಮಾರನೆಯ ದಿನ ಆಫೀಸಿಗೆ ಬಂದಾಗ ಆಗಲೇ ಅವಳು ಚಂದದ ಬಳೆಗಳನ್ನು ತೊಟ್ಟು, ಮೇಕಪ್ ಮಾಡಿಕೊಂಡು ತಯಾರಾಗಿ ಕಾಯುತ್ತಿರುವುದನ್ನು ನೋಡಿ ನಾನು ತಡ ಮಾಡದೆ ಅವಳ ಚೇಂಬರ್ನೊಳಗಡಿಯಿಟ್ಟೆ, ಅಂದು ಅವಳ ಕೋಣೆ ನಮ್ಮ ನಾಟಕದ ಗ್ರೀನ್ ರೂಂ ಆಗಿ ಮಾರ್ಪಾಡಾಯಿತು. ಸರಿ ಅವಳಿಗೆ ನನ್ನದೇ ಒಂದು ರವಿಕೆ ಅಡ್ಜಸ್ಟ್ ಮಾಡಿ, ನೀಟಾಗಿ ಸೀರೆ ಉಡಿಸಿ, ಬಿಂದಿ ಇಟ್ಟು (ವಧುವಿನಂತೆ) ಅವಳನ್ನು ಹೊರಗೆ ಕರೆ ತಂದಾಗ, ಇನ್ನಿತರ ಅರಬ್ ಸಹೋದ್ಯೋಗಿಗಳು ಅವಳನ್ನೇ ನೋಡುತ್ತಾ ಕಣ್ಣಲ್ಲೇ ನಕ್ಕು ವಾಹ್, ಇದೇನು ಅರ್ರಾ...ಥಿ, ಸಮ್ಮಾಳನ್ನು ಅಪ್ಪಟ ಭಾರತೀಯಳನ್ನಾಗಿ ಮಾಡಿಬಿಟ್ಟಿದ್ದೀರಲ್ಲಾ ಸೂಪರ್ ಅಂದಾಗ ನನಗೆ ಏನೋ ಹುಮ್ಮಸ್ಸು. ಅವಳು ಪದೇ ಪದೇ ಬಹುತ್ ಶುಕ್ರಿಯಾ ಆರತಿ ಎಂದು ತಾ ಕಲಿತ ಒಂದೆರಡು ಹಿಂದಿ ಶಬ್ದಗಳನ್ನು ನನ್ನ ಮೇಲೆ ಪ್ರಯೋಗಿಸಿ, ಸೀರೆಯನ್ನು ಮೇಲೆ ಎತ್ತಿ ಹಿಡಿದು ಕಷ್ಟಪಟ್ಟು ಸಂಭಾಳಿಸಿಕೊಂಡು ನಡೆದು ಹೋಗುವುದು ನೋಡಿ ನನಗೂ ನಗು... (ಸದ್ಯ ಕಾರ್ಯಕ್ರಮ ಮುಗಿಯುವವರೆಗೂ ಅವಳ ಸೀರೆ ಯಥಾಸ್ಥಿತಿಯಲ್ಲಿದ್ದು ಅವಳ ಜೊತೆ ನನ್ನ ಗೌರವವನ್ನೂ ಕಾಪಾಡಪ್ಪ ಎಂದು ನನ್ನ ಇಷ್ಟ ದೇವರನ್ನು ಬೇಡಿಕೊಂಡೆ).

ಈ ಮಧ್ಯೆ ಒಮ್ಮೆ ನಮ್ಮ ಕಚೇರಿಯಲ್ಲಿ ಅಕೌಂಟೆಂಟ್ ಆಗಿದ್ದ ಹುಸ್ಸೈನ್ (ಕೇರಳದವರು). ನನಗೊಂದು ಹೊಸ ಸುದ್ದಿ ತಂದರು. ನಾನು ಮೊದಲೇ ಹೇಳಿದಂತೆ ನಮ್ಮ ಕಚೇರಿಯಲ್ಲಿ ಭಾರತೀಯ ಮೂಲದವರು ನಾವಿಬ್ಬರೆ... ಹಾಗಾಗಿ ಆಫೀಸಿನ ಒಳ ಸುದ್ದಿಗಳೇನಿದ್ದರೂ ನಮಗೆ ತಿಳಿದ ತಕ್ಷಣವೇ ಒಬ್ಬರಿಗೊಬ್ಬರು ವಿನಿಮಯ ಮಾಡಿಕೊಳ್ಳುತ್ತಿದ್ದೆವು! ಅಂದು ಅವರು ಉತ್ಸಾಹದಿಂದ ಆರತಿ ನಿಮಗೆ ಗೊತ್ತಾ? ನಮ್ಮ ಆಫೀಸಿಗೆ ಒಬ್ಬ ಹೊಸ ಆಪರೇಷನ್ ಮ್ಯಾನೇಜರ್ ಸೇರ್ಪಡೆ ಆಗುತ್ತಿದ್ದರಂತೆ. ಹೆಸರು ಸಮೀರ್, ಆಚಕರ್ ಎಂದು ಕೇಳಿದ

ಹಾಗಿತ್ತು! ಅಂದಾಗ ನಾನು ತಕ್ಷಣ ಸಮೀರ್ ಆಚಾರ್ ಇರಬಹುದು ಅನ್ನತ್ತೆ ಹುಸೈನ್, ಭಾರತೀಯ ಹೆಸರು ಇದ್ದ ಹಾಗಿದೆ ಖುಷಿಯಿಂದಲೇ ಉಲಿದೆ! ಸರಿ ಲಂಚ್ ವೇಳೆಯಾಗಿದ್ದರಿಂದ ಅವರೊಂದಿಗೆ ಕುಶಲೋಪರಿಗಳು, ಸುದ್ದಿ ವಿಶೇಷಗಳು, ಸಮಯದ ಪರಿವಿಲ್ಲದೆ ಮುಂದುವರಿದು, ಕೊನೆಗೆ ಪರಿಸಮಾಪ್ತಿಗೊಂಡು ಅವರ ನಿರ್ಗಮನ ವಾಗುತ್ತಿದ್ದಂತೆಯೇ, ಆ ಕ್ಷಣದಿಂದಲೇ ಅವರು ಹೇಳಿದ ಹೆಸರಿನ ಸುತ್ತ ನನ್ನ ಊಹೆ ಪ್ರಾರಂಭವಾಗಿ ಬಿಟ್ಟಿತು. ಓಹ್! ಸಮೀರ್ ಆಚಾರ್ ಅಂದರೆ ಅಂದ್ರೆ ಕನ್ನಡದವರು ಇರಬಹುದಲ್ಲವೇ! ಅಂದುಕೊಂಡಾಗ ಮನಸ್ಸು ಸಂತಸದ ಮೋಡಗಳಲ್ಲಿ ತೇಲಾಡಿತು! ಹಾಗೆಯೇ ಅಂದು ಆಫೀಸಿನಿಂದ ಮನೆಯ ದಾರಿ ಹಿಡಿದಾಗ ಈ ವಿಚಾರವೆ ಮನದಲ್ಲಿ ಮನೆ ಮಾಡಿತ್ತು. ನಾನೂ ಮನಸ್ಸಿನಲ್ಲೇ ಮಂಡಿಗೆ ಮೆಲ್ಲುತ್ತಾ ಮನೆಯಲ್ಲೂ ನಮ್ಮವರಿಗೆ ಈ ಸುದ್ದಿಯನ್ನ ಬಿತ್ತರಿಸಿದಾಗ ಅವರೂ ಆಶ್ಚರ್ಯ, ಖುಷಿ ಒಟ್ಟಿಗೆ ವ್ಯಕ್ತಪಡಿಸಿದ್ದರು! ಅರಬ ಮೂಲದವರೇ ತುಂಬಿಕೊಂಡಿರುವ ನಮ್ಮ ಆಫೀಸಿನಲ್ಲಿ ಒಬ್ಬರಾದರೂ ನಮ್ಮ ಕನ್ನಡದವರಿದ್ದರೆ ಎಷ್ಟು ಚೆನ್ನ! ಎನ್ನುವ ಸಂತಸದ ಭಾವನೆಯೊಂದು ನನ್ನೊಳಗೆ ಅರಳಿ ಹೂವಾಗಿತ್ತು. ಅಂತೂ ನನ್ನ ನಿರೀಕ್ಷೆಯ ಕ್ಷಣಗಳಿಗೆ ಮಂಗಳ ಹಾಡುವ ಸಮಯ ಹತ್ತಿರವಾಯಿತು. ಅರ್ಥಾತ್ ನಮ್ಮ ಹೊಸ ಆಪರೇಷನ್ ಮ್ಯಾನೇಜರ್ ಆಗಮಿಸುವ ಶುಭ ಘಳಿಗೆ ಬಂದೇ ಬಿಟ್ಟಿತು. ನನಗೂ ಕೂಡಾ ಅವರನ್ನು ನೋಡುವ ಕುತೂಹಲ ಬೆಳೆದು ಹೆಮ್ಮರವಾಗಿ ನಿಂತಿತ್ತು! ಅಂದು ಬೆಳಿಗ್ಗೆ ಒಂಬತ್ತರ ಸುಮಾರಿಗೆ, ಸೂಟು/ಟೈನಲ್ಲಿ ಆಗಷ್ಟೇ ಬ್ಯುಸಿನೆಸ್ಸ್ ಮೀಟಿಂಗ್‌ನಿಂದ ಬಂದಂತೆ, ಒಬ್ಬ ಎತ್ತರದ ಸುಂದರ ವ್ಯಕ್ತಿ ಆಫೀಸಿನೊಳಗೆ ಕಾಲಿಟ್ಟರು. ನಮ್ಮ ಸಹೋದ್ಯೋಗಿಗಳು ಅವರನ್ನು ಸ್ವಾಗತಿಸಿ ಹೂ ಗುಚ್ಚಗಳನ್ನು ಕೊಟ್ಟ ಬಳಿಕ, ನಮ್ಮ ಮ್ಯಾನೇಜರ್ ಅವರನ್ನ ಎಲ್ಲರಿಗೂ ಪರಿಚಯಿಸುತ್ತಾ ಫ್ರೆಂಡ್ಸ್ ಇವರು ಸಾಮೇರ್ ಅಚಾಕರ್ ನಮ್ಮ ಕಛೇರಿಗೆ ಸೇರಿಕೊಳ್ಳುತ್ತಿರುವ ಹೊಸ ಆಪರೇಷನ್ ಮ್ಯಾನೇಜರ್, ಲೆಬಿನಾನಿನ ದೇಶದವರು!!! ಎಂದು ಉತ್ಸಾಹದಿಂದ ಪರಿಚಯಿಸಿದರು. ನಾನು ಕೂಡಾ ಇತರರಂತೆ ಅವರಿಗೆ ಹಲೋ ವೆಲ್ಕಂ ಸರ್ ಎಂದು ಅವರತ್ತ ಮುಗುಳ್ನಗೆ ಬೀರಿ ಹೇಳಿದರೂ, ಗೋಪುರದಂತೆ ಎತ್ತರಕ್ಕೇರಿದ ನನ್ನ ಉತ್ಸಾಹ ಜರ್‍ರನೆ ಇಳಿದು, ಮನದಲ್ಲಿ ನಿಧಾನವಾಗಿ ನಿರಾಶೆಯ ಕಾರ್ಮೋಡಗಳು ಹೆಪ್ಪುಗಟ್ಟಲಿಕ್ಕೆ ಶುರು ಮಾಡಿದ್ದವು! ಇನ್ನು ನಾ ಕಟ್ಟಿಕೊಂಡಿದ್ದ ಊಹೆಯ ಸೌಧ ಗ್ರೌಂಡ್ ಜೀರೋ ಆಗಿ ಮಲಗಿ ಬಿಟ್ಟಿತ್ತು ಅಂತ ಬೇರೆ ಹೇಳಬೇಕೆ ಆದರೆ ಆ (ಪೆದ್ದ) ಭಾವನೆಗಳೆಲ್ಲಾ ಆ ಕ್ಷಣಕ್ಕಷ್ಟೇ ಜಾಮಯಿಸಿಕೊಂಡು ನಿಧಾನವಾಗಿ ಕರಗಿ ನೀರಾಗಿ ಹರಿದು ಹೋದವು. ಆದರೆ ಹೀಗೆಲ್ಲಾ ಆಸೆ ಪಡುವುದರಲ್ಲಿ ತಪ್ಪೇನು ಇಲ್ಲ ಎಂದು ನೀವು ಒಪ್ಪುತೀರಾ ಅಲ್ವೇ।

ಇರಲಿ, ಈ ನಮ್ಮ ಹೊಸ ಆಪರೇಷನ್ ಮ್ಯಾನೇಜರ್ ನಮ್ಮ ಕಚೇರಿಗೆ ಕಾಲಿಟ್ಟಾಗಿನಿಂದ ಎಲ್ಲರ ಜೊತೆ ಸೌಹಾರ್ದತೆಯನ್ನೇ ಮೆರೆದಿದ್ದರು. ಎಂದೂ ಬಾಸ್ ಗಿರಿ ತೋರದೆ ತಮ್ಮ ಕಾರ್ಯಕ್ಷಮತೆ, ಸ್ನೇಹ ಸ್ವಭಾವದಿಂದ ನಮ್ಮೆಲ್ಲರ ಮನಸನ್ನ ಬಹಳ ಶೀಘ್ರದಲ್ಲೇ ಗೆದ್ದು ಬಿಟ್ಟಿದ್ದರು. ಆದರೆ ಅವರು ಕನ್ನಡದವರಿರಬಹುದು ಎಂದು ಅವರ ಬರುವಿಕೆಯ ಸುತ್ತಾ ನನ್ನಲ್ಲಿ ಹೆಣೆದು ಕೊಂಡಿದ್ದ ಕಲ್ಪನೆಯ ಎಳೆಗಳು ನೆನಪಾದಾಗ ಈಗಲೂ ಕಚಗುಳಿ ಇಟ್ಟಂತಾಗುತ್ತದೆ!

✺

# ಕೇಳು ಜನಮೇಜಯ

**- ಎಚ್. ಶಾಂತರಾಜ ಐತಾಳ**

ಜನಮೇಜಯನೆಂಬ ಪುರಾಣ ಪ್ರಸಿದ್ಧನಾದ ವ್ಯಕ್ತಿ ಸರ್ಪಯಾಗವನ್ನು ಮಾಡಿಸಿ, ನಂತರ ಅದಕ್ಕೆ ಪ್ರಾಯಶ್ಚಿತ್ತವನ್ನೂ ಮಾಡಿಸಿಕೊಂಡ ಮಹಾಪುರುಷ. ಪಾಪ ಪರಿಹಾರ ಮಾಡಿಕೊಳ್ಳಲು ಆತ ಅನುಸರಿಸಿದ ಕ್ರಮವೆಂದರೆ ಮಹಾಭಾರತ ಶ್ರವಣ. ಜೈಮಿನಿ ಮುನಿಗಳು ಮಹಾಭಾರತದ ವೃತ್ತಾಂತವನ್ನು ವಿವರಿಸುತ್ತಿರುವಾಗ ಮಧ್ಯೆ ಮಧ್ಯೆ 'ಕೇಳು ಜನಮೇಜಯ' ಎನ್ನುತ್ತಿದ್ದರಂತೆ.

ಈ 'ಕೇಳು ಜನಮೇಜಯ' ಎಂದು ಮುನಿಗಳು ಹೇಳೋದಕ್ಕೆ ಎರಡು ಕಾರಣಗಳಿರಬಹುದು ಅಂತ ನನ್ನ ಅನಿಸಿಕೆ. ಮೊದಲನೆಯ ಕಾರಣ ತುಂಬಾ ಸರಳ. ಪುರಾಣ ಕೇಳ್ತಾ ಕೇಳ್ತಾ ಜನಮೇಜಯ ಎಂಬ ಅಸಾಮಿ ಆಕಳಿಸಲಿಕ್ಕೆ ಆರಂಭ ಮಾಡಿದರೆ, ಸ್ಕೂಲಲ್ಲಿ ಟೀಚರ್ ಹೇಳೋ ಹಾಗೆ ಲಿಸನ್-ಲಿಸನ್ ಅಂತ ಹೇಳಿರಬಹುದು. 'ಇಲ್ಲಿ ಸ್ವಲ್ಪ ಕೇಳು ಮಾರಾಯಾ' - ಅಂತ ಅಥವಾ ಎರಡನೆಯ ಕಾರಣ ಸುಮ್ಮನೆ ನಾನು ಹೇಳಿದ್ದನ್ನು ಆಲಿಸುತ್ತಾ ಕೂರೋದಲ್ಲ-ಮಧ್ಯೆ ಮಧ್ಯೆ ಪ್ರಶ್ನೆಗಳನ್ನು 'ಕೇಳು ಓ ಜನಮೇಜಯ' - ಎಂದೂ ಆಗಿರಬಹುದು.

ಅದು ಹೇಗೂ ಇರಬಹುದು. ನಮ್ಮಲ್ಲಿ ಕೆಲವರು ಈ ಎರಡನೇ ವರ್ಗಕ್ಕೆ ಸೇರಿದವರಿರ್ತಾರೆ. ಅವರಿಗೆ ಪ್ರಶ್ನೆ ಕೇಳೋದೇ ಒಂದು ಖಯಾಲಿ. ನಮ್ಮ ಗುಂಡೋಪಂತ ಮಾವ ಇದೇ ವರ್ಗಕ್ಕೆ ಸೇರಿದವರು. ಅವರ ಈ ಖಯಾಲಿ ಅವ್ಯಾಹತವಾಗಿ ಸಾಗಿ ಬರಲು ಅವರು ಅನಿವಾರ್ಯವಾಗಿ ಅವಿವಾಹಿತರಾಗಿ ಉಳಿದದ್ದೇ ಕಾರಣವಿರಬೇಕು. ಈಗ ಎಂಬತ್ತರ ಗಡಿ ದಾಟಿರುವ ಗುಂಪಂ ಮಾವ ತಮ್ಮ ಈ ಹವ್ಯಾಸದ ಕುರಿತಾದ ರಸವತ್ತಾದ ಘಟನೆಗಳನ್ನೋ ಕಟ್ಟುಕತೆಗಳನ್ನೋ ಉದುರಿಸುತ್ತಲೇ ಇರುತ್ತಾರೆ. ಇನ್ನು ಕೂಡಾ ಅವರ ಗಡಸು ಭಾಷೆ ಬಡವಾಗಿಲ್ಲ. ಸಣಕಲು ದೇಹದ ನಡು ಬಾಗಿಲ್ಲ.

ತಮ್ಮ ಮದುವೆಯ ಸಲುವಾಗಿ ಕನ್ಯಾ ತಪಾಸಣೆ ನಡೆಸುತ್ತಿದ್ದ ಸಮಯದಲ್ಲಿ ಹುಡುಗಿಯ ಮನೆ ಮಂದಿಗೆಲ್ಲ ಪ್ರಶ್ನೆಗಳ ಸುರಿಮಳೆಯನ್ನೇ ಸುರಿಸುತ್ತಿದ್ದ ಈ ಭೂಪ, ಎಲ್ಲರಿಂದಲೂ ತಿರಸ್ಕೃತರಾಗುತ್ತಿದ್ದರು, ಪಾಪ! ಇನ್ನು ಅವರು ಕೇಳುತ್ತಿದ್ದ ಪ್ರಶ್ನೆಗಳ ವೈಖರಿಯೋ, ದೇವರಿಗೇ ಪ್ರೀತಿ. ತಮ್ಮ ಹುಟ್ಟೂರಾದ ಧಾರವಾಡದಿಂದ ಹತ್ತು ಮೈಲಿ ದೂರದ ಒಂದು ಹಳ್ಳಿಯಲ್ಲಿ ಒಮ್ಮೆ ವಧು ಪರೀಕ್ಷೆಗೆ ತಮ್ಮ ಒಬ್ಬಳೇ ಅಕ್ಕನ ಜತೆ ಹೋಗಿದ್ದರಂತೆ. ಈ ಗುಂಪಂ ಮಾವ ಆ ಕಾಲದ ಪದ್ಧತಿಯಂತೆ ಹುಡುಗಿಯನ್ನು ನೋಡುವ ಶಾಸ್ತ್ರವೆಲ್ಲ ಮುಗಿದ ಮೇಲೆ ಶುರುವಾಯಿತಂತೆ ಇವರ ಪ್ರಶ್ನಾವಳಿ.

'ಕನ್ಯಾ ಛಲೋ ಇದಾಳೇನೋ, ಖರೆ. ಆಕಿಗೆ ಹಾಡು, ಹಸೆ ಏನಾದ್ರೂ ಬರ್ತದೇನು?' ಅಂತ ಮೊದಲಿನ ಛೂಬಾಣ ಬಿಟ್ಟರಂತೆ. ಅದಕ್ಕೆ ಕನ್ಯಾಪಿತನೇ ಉತ್ತರಿಸದರಂತೆ.

'ಓಹೋ! ಉತ್ತರಾದಿ, ದಕ್ಷಿಣಾದಿ ಎರಡೂ ಕಲತಾಳ್ರಿ; ಈಗ ದೀಡ್ ವರ್ಸಾತು ಸೀನಿಯರ್ ಪಾಸ್ ಮಾಡ್ಯಾಳ. ಅದೇನು ಸ್ವಾಹಿಲಿ ಭಾಷಾದೊಳಗ ರ್‍ಯಾಪ್ ಮ್ಯೂಜಿಕ್ ಕಲಿಯಾಕ ಈಗ ಹತ್ಯಾಳ ನೋಡ್ರಿ.'

'ಮತ್ತಿನ್ನೇನು ಬರ್ತತಿ ಆಕಿಗೆ?'

'ಮತ್ತ ನೋಡ್ರಿ ಭರತನಾಟ್ಯ ಬರ್ತದೆ, ಆಮ್ಯಾಗಿಂದ ಅದೇನು ಕಚಗುಳಿ ಅಂತಾರಲ್ರೀ ಮಲಯಾಳಿ ಮಂದಿ-ಅದೂ ಬರ್ತತಿ.'

'ಅಡಿಗೆ ಪಡಿಗೆ ಬರ್ತತೇನು?' ಮತ್ತೆ ಗುಂಪಂ ಮಾವ ಕೇಳಿದ್ರಂತೆ.

‘ಹೌದೇಳ್ರಿ; ಸಾರು, ಪಲ್ಲೆ, ಜ್ವಾಳದ ರೊಟ್ಟಿ, ಸಜ್ಜೀರೊಟ್ಟಿ, ಉಳ್ಳಾಗಡ್ಡೆ ಖಿಚಡಿ–ಪಚಡಿ, ಮೆಕ್ಕಿಕಾಯಿ ಪಲ್ಲೆ, ಸೀಕರಣೆ–ಏನು ಬೇಕು ಹೇಳ್ರಲಾ ಎಲ್ಲಾ ಬರ್ತತಿ ನಮ್ಮ ರೇಣುಕವ್ವಗೆ.’

‘ಮತ್ತ ಹೊಲಿಗೆ ಬರ್ತತೇನು?’

‘ಯಾಕ ಬರವಲ್ದು? ಮಸ್ತ ಹೊಲಿತಾಳ್ರಿ. ಹೊಲಿಗಿ ಮೆಶಿನು ಅಲ್ಲೈತೆ ನೋಡ್ರಲಾ–ಲಂಗ, ಚೋಲಿ, ದಾವಣಿ, ಕುರ್ತಾ, ಜಂಪರ, ಎಲ್ಲ ಚಲೋತ್ನಾಗ ಹೊಲ್ದು ಕೊಡ್ತಾಳ್ರಿ.’ ಇಷ್ಟೆಲ್ಲ ಉತ್ತರ ಕೊಡುವಾಗ ತಂದೆ ತಾಯಿಯರಿಬ್ಬರೂ ಎದ್ದು ಕಾಣಿಸುತ್ತಿದ್ದ ತಮ್ಮ ಕೋಪವನ್ನು ಹದ್ದು ಬಸ್ತಿನಲ್ಲಿಡಲು ಯತ್ನಿಸುತ್ತಿದ್ದರು.

‘ಆಟಾ, ಪಾಟಾ ಬರ್ತತೇನು.’

‘ನೋಡ್ರಿ ಆಕಿಗೆ ಕರಾಟೆ ಬರ್ತತೆ, ಕುಸ್ತಿ, ಮಲ್ಲಯುದ್ಧ ಎಲ್ಲ ಬರ್ತತೆ, ಸಾಕೇನ್ರಿ’ ಎಂದುತ್ತರಿಸಿ, ಒಂದು ಸಣ್ಣ ಅಸಮಾಧಾನದ ಸೂಚನೆಯನ್ನು ಕೊಟ್ಟೇ ಬಿಟ್ರಂತೆ ರೇಣುಕವ್ವನ ತಂದೆ. ಆದರೆ ಈ ಪುಣ್ಯಾತ್ಮ ಗುಂಪಂ ಮಾವ ಸುಮ್ಮನಿರಬೇಕಲ್ಲಾ? ಇನ್ನೂ ಕೇಳೇ ಕೇಳ್ತಾರಂತೆ.

‘ಭಲೋ ಆತು; ಇನ್ನೇನೆಲ್ಲ ಬರ್ತತಿ ಆಕಿಗೆ ಹೇಳ್ರಲ್ಲಾ’ – ಅಂತ. ಅದಕ್ಕವರು ‘ಇನ್ನು ದಿನಕ್ಕೆ ಹತ್ತು ಸಲ ಬಿಕ್ಕಳಿಕೆ ಬರ್ತತೆ; ವಾರದಲ್ಲಿ ಮೂರು ಸಲ ಫಿಟ್ಸ್ ಬರ್ತತೆ; ತಿಂಗಳಿಗೊಮ್ಮೆ ದಮ್ಮು ರೋಗ ಬರ್ತತೆ–ಸಾಕು ಸಾಕು–ಎದ್ದೇಳ್ರಿ–ನಡೀರಿ ಹೊರಕ್ಕೆ–ನಿಮ್ಮ ಸಂಬಂಧ ಬೆಳೆಸಿಬಿಟ್ರೆ ತೀರ್ತು ಶಿವಾಯ ನಮಃ’ ಅಂದೇ ಬಿಟ್ರಂತೆ. ಗುಂಪಂ ಮಾವನಿಗೆ ಇದೇ ರೀತಿಯ ಅನುಭವ ಇನ್ನೂ ನಾಲ್ಕು ಕಡೆ ಆದ ಮೇಲೆ ‘ಜೈ ಜೈ ಹನುಮಾನ್’ ಎನ್ನುತ್ತಾ ಮದುವೆಯ ಯೋಚನೆಗೇ ‘ಬೈ ಬೈ’ ಅಂದ್ರಂತೆ. ಎಲ್.ಎಲ್.ಬಿ. ಪದವಿ ಸಿಕ್ಕ ಹಾಗಾಯ್ತು ಈ ಗುಂಪಂ ಎಂಬ ಲೈಫ್ ಲಾಂಗ್ ಬ್ಯಾಚುಲರ್ ಅಜೀವ ಬ್ರಹ್ಮಚಾರಿಗೆ!

ಅಲ್ಲಿ, ಇಲ್ಲಿ ಬಂಧು ಬಳಗದವರ ಮನೆಗಳಿಗೆ ಆಗಾಗ ಭೇಟಿ ನೀಡುತ್ತಿದ್ದ ಗುಂಪಂ ಮಾವ ಎಲ್ಲಿಗೆ ಹೋದ್ರೂ ತಮ್ಮ ಹುಟ್ಟುಗುಣವನ್ನು ಬಿಟ್ಟು ಕೊಡಲೇ ಇಲ್ಲ. ಅಪ್ಪಿ ತಪ್ಪಿ ಒಂದು ಹಾಸ್ಯ ಪ್ರಸಂಗ ಅವರೆದುರು ಹೇಳಿದರೆ ಸಾಕು ಅಂತಿಮ ಘಟ್ಟದಲ್ಲಿ ಇವರ ಪ್ರಶ್ನೆ ಸಿದ್ಧವಾಗಿರುತ್ತದೆ. ಆದರೆ ಅಷ್ಟರಲ್ಲಿ ಆ ಹಾಸ್ಯ ರದ್ದಿಯಾಗಿರುತ್ತದೆ.

ಮಿತ್ರರಿಬ್ಬರು ತಮಾಷೆಯಾಗಿ ಕಾಲಹರಣ ಮಾಡುತ್ತಿರುವಾಗ ರಂಗಸ್ಥಳಕ್ಕೆ ಗುಂಪಂ ಮಾವನ ಪ್ರವೇಶವಾಗುತ್ತದೆ. ಮಿತ್ರರಲ್ಲೊಬ್ಬ ಹೇಳ್ತಾ ಇರುತ್ತಾನೆ.

‘ಒಬ್ಬಾಂವ ತನ್ನ ಹೆಣ್ತೀಗೆ ದಿನಕ್ಕೊಂದು ಸೀರೀ ಕೊಡಸ್ತಾನ. ಕೊಡ್ಸೀ ಕೊಡ್ಸೀ ಸುಸ್ತಾಗ್ತಾನ. ಆ ಮ್ಯಾಗ ಒಂದಿನ ಆಕೀ ಮುಂದ ಹೇಳ್ತಾನ – ನೋಡ ಬೀ, ಅದೇಟು ಕೇಳ್ತೀಯೋ ಆಟೂ ಸೀರಿ ನಿನಗೆ ಕೊಡಿಸ್ಯಾತು. ಎಲ್ಲ ಬಣ್ಣದ ಸೀರೀ ಕೊಡ್ಸೀನಿ. ರಗಡ್ ರೊಕ್ಕಾ ಕರ್ಚಾಗ್ಯೆತಿ, ಹೈರಾಣಾಗೀನಿ. ನಾ ಇನ್ನು ಜೀವಾ ತಕೋತೀನಿ ತಿಳೀತೂ–ಅಂತ.’ ಅದಕ್ಕಾಕಿ

‘ನೀವು ಜೀವ ತಕೋತಿರಿ ಹೌದಿಲ್ಲೋ–ಹಂಗಾರ ನನಗೊಂದು ಬಿಳೀ ಕಲರ್ ಸೀರೀ ಕೊಡ್ಸಿ ಬಿಡ್ರಲ್ಲಾ–ಅಂತಾಳ.’

ಇಷ್ಟು ಹೇಳಿ ಮುಗಿಸುವಾಗ ಈ ಪ್ರಸಂಗದ ಹಾಸ್ಯವನ್ನು ಗ್ರಹಿಸಿ, ಎರಡನೇ ಮಿತ್ರ ನಗಬೇಕು ಎನ್ನುವಷ್ಟರಲ್ಲಿ, ಅಲ್ಲಿ ಆಗಲೇ ತಳ ಊರಿದ್ದ ಗುಂಪಂ ಮಾವ ಕೇಳ್ತಾರೆ,

‘ಆ ಮೇಲೇನಾತೂ? ಅಂವ ಬಿಳೀ ಸೀರೀ ಕೊಡಿಸಿ, ಜೀವಾ ಬಿಟ್ನಾ ಅಲ್ಲ ಹಂಗೇ ಬಿಟ್ನಾ?’ ಅಂತ.

ಮಿತ್ರರಿಬ್ಬರೂ ತಲೆ ತಲೆ ಚಚ್ಕೋತಾರೆ.

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**- ದಂನಆ**

- ಮ್ಯಾಗಿ ವಿವಾದದ ನಂತರ ಕೈಲಾಸಂ ಹೀಗೆ ಹೇಳಬಹುದಿತ್ತು: ಮಕ್ಕಳ ಊಟ ಮನೇದಲ್ವೆ?
- ಮುಂಗಾರು ಗೀತೆ: ಮತ್ತ ಮಳೆ ಹುಯ್ಯುತಿದೆ, ಕೊಡೆ ಬಿಚ್ಚಿಕೊಳ್ಳುತ್ತಿದೆ....
- ಆರೋಗ್ಯವೇ ಭಾಗ್ಯ? ಅದೇ, ನಮ್ಮ ಆರೋಗ್ಯವೇ ವೈದ್ಯರ ಭಾಗ್ಯ.
- ನಾವು ಬ್ರೈನ್ ವಾಷ್ ಆಗುತ್ತಿಲ್ಲ, ಬ್ರಾಂಡ್ ವಾಷ್ ಆಗುತ್ತಿದ್ದೇವೆ.
- ಊಟ ಇಷ್ಟು ಲೈಟಾದರೆ ಹೇಗೆ ಸ್ವಾಮಿ? ಎಂದು ಕೇಳಿದ್ದು ಒಬ್ಬ ಕವಿಯೇ ಇರಬೇಕು. ಮದುವೆ ಮನೆ ಭೋಜನ ಸಪ್ಪೆಯಾದಾಗ.
- ಅದು ಅಸಾಧ್ಯ ಎಂದು ಆ ಮೂರ್ಖನಿಗೆ ತೋರಲಿಲ್ಲ, ಆದುದರಿಂದಲೇ ಮಾಡಿ ತೋರಿಸಿದ.
- ಈ ಕೆಟ್ಟ ಪ್ರಪಂಚದಲ್ಲಿ ಯಾವುದೂ ಶಾಶ್ವತವಲ್ಲ, ನಿಮ್ಮ ಸಮಸ್ಯೆಗಳೂ ಸಹ.
- ಹಿ ವಾಸ್ ಬಾರ್ನ್ ಇನ್ ಅ ಲಾಗ್ ಕ್ಯಾಬಿನ್ ವಿಚ್ ಹಿ ಬ್ಯುಲ್ಟ್ ಹಿಮ್‌ಸೆಲ್ಫ್.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ನಿಮ್ಮ ಖಾಸಗಿತನ ಮುಗಿಯಿತು ಎಂದರೆ ನೀವು ಫೇಮಸ್ ಆದಿರಿ ಎಂದೇ ಅರ್ಥ.
- ಒಬ್ಬ ಪ್ರಬುದ್ಧ ಮನುಷ್ಯ ದೊಡ್ಡ ದೊಡ್ಡ ವಿಷಯಗಳ ಬಗ್ಗೆ ಮಾತನಾಡುವುದಿಲ್ಲ, ಆದರೆ ಸಣ್ಣ ಸಣ್ಣ ವಿಷಯಗಳನ್ನು ಅರ್ಥಮಾಡಿಕೊಳ್ಳುತ್ತಿರುತ್ತಾನೆ.
- ವೃದ್ಧಾಪ್ಯದಲ್ಲಿ ಹೊಸದಾಗಿ ತಿಳಿದುಕೊಳ್ಳುವುದಕ್ಕಿಂತ ತಿಳಿದುಕೊಂಡಿರುವುದನ್ನು ಅನುಷ್ಠಾನಕ್ಕೆ ತಂದುಕೊಳ್ಳುವುದು ಒಳ್ಳೆಯದು.
- ಇತರರ ಸೋಲು ನಿನ್ನ ಗೆಲುವಲ್ಲ.
- ಎ ಸೈಲೆನ್ಸ್ ಕೆನ್ ನೆವರ್ ಬಿ ಮಿಸ್‌ಕೋಟಡ್.
- ಏನೂ ಮಾಡದೆ ಇದ್ದು ನಂತರ ವಿಶ್ರಾಂತಿ ಪಡೆಯುವುದರಲ್ಲಿ ಎಷ್ಟು ಮಜ ಇದೆ ಅಲ್ಲವೆ?
- ಪಿಕ್ ಪಾಕೆಟ್ಸ್ ಬುಸಿನೆಸ್ ಈಸ್ ಪಿಕಿಂಗ್ ಅಪ್.
- ಬಾಲಿವುಡ್ ನಟ ಉವಾಚ: ಸ್ವಿಡ್ಜರ್‌ಲ್ಯಾಂಡ್ ಇರುವಾಗ ಸ್ಕ್ರಿಪ್ಟ್‌ನ ಅವಶ್ಯಕತೆಯಾದರೂ ಏನಿದೆ?
- ಯಾವುದೇ ಮಧ್ಯಮವರ್ಗದವ ತಾನು ವಿಜಯ್ ಮಲ್ಯ ಆಗಲು ಬಯಸುತ್ತಿದ್ದ ಹಿಂದೊಮ್ಮೆ.
- ನೀವು ಟೆಲಿಸ್ಕೋಪ್ ಬಳಸುತ್ತಿದ್ದರೂ ನೋಡುವುದು ಕಣ್ಣಿನಿಂದಲೇ.
- ಸರ್ವಸಮ್ಮತಿ ಎಂದರೆ ಒಕ್ಕೊರಲಿನಿಂದ ಯೆಸ್ ಎನ್ನುವುದು ಆದರೆ ವೈಯಕ್ತಿಕವಾಗಿ ಅಸಮ್ಮತಿ ಸೂಚಿಸುವುದು.

**Advertisement**

**Advertisement**

# ಒಂದು ಮೂಳೆಯ ಕತೆ

**- ಸಿ.ಆರ್. ಸತ್ಯ**

**ಮೊ**ನ್ನೆ ಮೊನ್ನೆ ನನ್ನ ಎಡಗಾಲು ತಿರುಚಿಕೊಂಡು ಪಾದದ ಚಿಕ್ಕ ಬೆರಳಿನ ಬಳಿ ಒಂದು 'ಕ್ರ್ಯಾಕ್' ಕಾಣಿಸಿಕೊಂಡಿತು. ಸರಿ, ನನ್ನ ಮೂಳೆ ಡಾಕ್ಟರು ಮಾತ್ರೆಗಳನ್ನು ಕೊಟ್ಟು, ಕ್ರೇಪ್ ಬ್ಯಾಂಡೇಜ್ ಕಟ್ಟಿ, ಮೂರು ವಾರಗಳ ಕಾಲ ಓಡಾಡದೇ ಇರಿ ಅಂತ ಹುಕುಂ ಕೊಟ್ಟರು. ಈ ವಿಷಯ ನನ್ನ ಹತ್ತಿರದ ಸ್ನೇಹಿತರಿಗೂ ಅಕ್ಕ ಪಕ್ಕದ ಮನೆಯವರಿಗೂ ತಿಳೀತು. ನನಗೆ ಅನುಕಂಪ ತೋರಿಸೋದಕ್ಕೆ ಒಬ್ಬೊಬ್ಬರಾಗಿ ಬರೋದಕ್ಕೆ ಶುರು ಮಾಡಿದರು. ಒಬ್ಬರು ''ಏನ್ರೀ, ಕೈ ಕಾಲುಗಳೆಲ್ಲಾ ಮುರಿದುಕೊಂಡು ಬಿಟ್ರಿ ಅಂತ ಕೇಳಿ, ಸದ್ಯ ಬರೀ ಒಂದು ಕಾಲಿಗೆ ತಾನೇ ಪ್ರಾಬ್ಲಮ್ಮು! ಹೇಗೋ ಮ್ಯಾನೇಜ್ ಮಾಡಿಕೊಳ್ಳಬಹುದು ಬಿಡಿ'' ಅಂತ ಸಮಾಧಾನ ಹೇಳಿ ಹೋದರು. ಇನ್ನೊಬ್ಬರು, ''ನಡೆಯೋವಾಗ ಎಲ್ಲಿತ್ರಿ ನಿಮ್ಮ ಗಮನ? ಬೆಂಗಳೂರು ರಸ್ತೆಗಳ ಬಗ್ಗೆ ನಿಮಗೆ ಅಷ್ಟು ಗೊತ್ತಿಲ್ವೆ? ಇನ್ನು ಮೇಲಾದ್ರೂ 'ಹೆಜ್ಜೆಯ ಮೇಲೆ ಹೆಜ್ಜೆಯನಿಕ್ಕುತ...' ಅಂತ ಸರಿಯಾಗಿ ನಡೀರಿ'' ಅಂತ ಬಯ್ದು ಹೋದರು. ಅವರು ಹೋದ ಮೇಲೆ ಇನ್ನೊಬ್ರು ಮಹಾಶಯರು ಬಂದರು. ಈ ಪುಣ್ಯಾತ್ಮನಿಗೆ ಕಿವಿ ಕೇಳಲ್ಲ. ''ಏನಪ್ಪಾ, ನಿಮ್ಮ ಮನೇಲಿ ಯಾವುದೋ ಕೋಲು ಮುರೀತು ಅಂತ ಕೇಳಿದೆ. ಯಾವುದು ಬಟ್ಟೆ ಒಣಗಿ ಹಾಕೋ ಮಡಿ ಕೋಲೇ?'' ಅಂತ ಕೇಳಿದರು. ಅದಕ್ಕೆ ನಾನು, ''ಕೋಲಲ್ಲ, ನನ್ನ ಎಡಗಾಲಿನ ಮೂಳೆ ಮುರಿದಿದ್ದು'' ಅಂತ ತಿದ್ದಿದೆ. ಆಗವರು, ನಮ್ಮ ಮನೇಲೂ ನಮ್ಮ ಅಜ್ಜಿ ಕಾಲದ್ದು ಒಂದು ಮಡಿ ಕೋಲು ಮುರಿದು ಹೋಯ್ತು. ಈಗಂತೂ ಆ ಕ್ವಾಲಿಟಿ ಕೋಲುಗಳು ಎಲ್ಲಿ ಸಿಗುತ್ವೆ ಹೇಳಿ ಅಂದರು. ನಾನು, ''ಕೋಲಲ್ಲಾ ಸ್ವಾಮೀ, ಕಾಲೂ!'' ಅಂತ ಕೂಗಿಕೊಂಡೆ. ಅದಕ್ಕೆ ಅವರು ''ಏನೋ, ಕೈಯೋ ಕಾಲೋ ಮುರಿದಿದ್ದರೆ, ಮೂಳೆಗಳಾದ್ರೂ ಕೂಡ್ಕೊಳ್ಳುತ್ವೆ. ಕೋಲು ಮುರಿದರೆ ಕೋಲನ್ನ ಬಿಸಾಕೋದೇ! ನಿಮ್ಮ ಮನೇಲಿ ವಾಶಿಂಗ್ ಮೆಶಿನ್ ಇದೆ ತಾನೆ? ಡ್ರೈಯರ್ ಇದೆ ತಾನೆ? ಸರಿ ಬಿಡಿ, ಇನ್ಯಾಕೆ ಕೋಲಿನ ಬಗ್ಗೆ ತಲೆ ಕೆಡಿಸ್ಕೋತ್ತೀರಾ?'' ಅಂತ ನನ್ನನ್ನು ಸಂತೈಸಿ, ಕಾಫೀನೂ ಕುಡ್ಕೊಂಡು ಹೋದರು. ಇನ್ನೊಬ್ಬರು ತಮ್ಮ ಹೆಂಡತಿ ಜೊತೆ ಕೈನಲ್ಲಿ ಹಣ್ಣುಗಳು ತುಂಬಿದ್ದ ಒಂದು ಬ್ಯಾಗ್‌ನ ಹಿಡ್ಕೊಂಡು ನನ್ನನ್ನ ವಿಚಾರಿಸ್ಕೊಳ್ಳೋಕ್ಕೆ ಬಂದರು. ವರಾಂಡದಲ್ಲಿ ಬರ್ತಿದ್ದಾಗ, ನನಗೆ ಕೇಳಿಸೋದಿಲ್ಲ ಅಂತ ಅಂದುಕೊಂಡು, ಅವರ ಹೆಂಡತಿ ''ರ‍್ರೀ, ಪೆದ್ದು ಪೆದ್ದಾಗಿ ಎಲ್ಲಾ ಹಣ್ಣುಗಳನ್ನೂ ಎತ್ಕೋತಾನೇ ಕೊಟ್ಬಿಡ್ಬೇಡಿ. ಎಷ್ಟು ಫ್ರಾಕ್ಚರ್‌ಗಳಾಗಿವೆ ಅಂತ ಕೇಳ್ಕೊಂಡು ಆಮೇಲೆ ಯೋಚನೆ ಮಾಡಿ ಕೊಡಿ'' ಅಂತ ಗುಟ್ಟಾಗಿ ಹೇಳಿದ್ದನ್ನ ಕೇಳಿಸ್ಕೊಂಡೆ. ಇಬ್ಬರೂ ಒಳಗೆ ಬಂದರು. ''ಅಯ್ಯೋ ಪಾಪವೇ! ಎಷ್ಟು ಫ್ರಾಕ್ಚರ್‌ಗಳಾಗಿವೆ ನಿಮಗೆ?'' ಅಂತ ಕೇಳಿದರು. ನಾನು 'ಕಿರು ಬೆರಳ ಕೆಳಗಡೆ ಒಂದು ಫ್ರಾಕ್ಚರ್ ಆಗಿದೆ ಅಷ್ಟೆ' ಅಂತ ನಿಜ ಸಂಗತೀನೇ ಹೇಳಿದೆ. ಗಂಡ ಹೆಂಡತೀಗೆ ಮುಖ ಅರಳಿದ ಹಾಗೆ ಕಾಣ್ತು. ಆತ ಹಣ್ಣುಗಳ ಬ್ಯಾಗಿಗೆ ಕೈ ಹಾಕಿ, ಬ್ಯಾಗ್ ಒಳಗೇನೇ ಒಂದು

ಚಿಕ್ಕ ಸೇಬಿನ ಹಣ್ಣನ್ನ ಆರಿಸಿ ಹೊರ ತೆಗೆದು, ನನ್ನ ಟೇಬಲ್ ಮೇಲೆ ಇಟ್ಟು ''ವಿಶ್ ಯೂ ಎ ಸ್ಪೀಡೀ ರಿಕವರಿ!'' ಅಂತ ಆತ್ಮೀಯವಾಗಿ ಹರಸಿ ಹೋದರು.

ಇನ್ನು ಸ್ವಲ್ಪ ಹೊತ್ತಿಗೆ ನಮ್ಮ ಪಕ್ಕದಲ್ಲಿರೋ ನಮ್ಮ ಫ್ರೆಂಡ್ ತಾಯಿ ಸುನಾಮಿ ತರಹ ಮನೆಯೊಳಗೆ ನುಗ್ಗಿ ಬಂದು, ನನ್ನ ಹೆಂಡತೀನ ''ಏನಮ್ಮಾ, ನಿಮ್ಮ ಮನೇಲಿ ಏನೋ ಮುರೀತು ಅಂತ ಕೇಳಿದೆ. ಏನು, ಯಾವುದಾದರೂ ಮರದ ಕೊಂಬೇನೇ?'' ಅಂತ ಕೇಳಿದರು. ಈ ಸಮಯಕ್ಕೆ ನನ್ನ ಹೆಂಡತಿಗೆ ಇಬ್ಬರ ಮೇಲೆ ಮಹಾ ಸಿಟ್ಟು ಬಂತು. ಇಷ್ಟೆಲ್ಲಾದಕ್ಕೂ ಕಾರಣ ಕರ್ತನಾದ ನನ್ನ ಮೇಲೆ, ಈ ಪಕ್ಕದ ಮನೆ ಹೆಂಗಸಿನ ಮೇಲೆ ಕೋಪದಲ್ಲೇ ''ಹೌದು, ನೆನ್ನೆ ತುಂಬಾ ಗಾಳಿ ಬೀಸ್ತಲ್ಲಾ, ಆಗ ನಮ್ಮ ಮನೆ ಸಂಪಿಗೆ ಮರದ ಒಂದು ಕೊಂಬೆ ಮುರ್ಕೊಂಡು ಬಿತ್ತು'' ಅಂತ ಹೇಳಿದಳು. ಅದಕ್ಕೆ ಆಕೆ ''ಹೋಗಲಿ ಬಿಡಮ್ಮ, ಸದ್ಯ ನಿಮ್ಮ ಕೈ ಕಾಲುಗಳೇನು ಮುರಿದಿಲ್ಲವಲ್ಲ! ಕೂಡಿಕೊಳ್ಳೋಕ್ಕೆ ಕಷ್ಟ ಆಗಿರೋದು ಮರದ ಕೊಂಬೆಗೆ ತಾನೆ? ಇನ್ನೊಂದು ಮಳೆ ಬಂದ್ರೆ ಚಿಗುರಿಕೊಳ್ಳುತ್ತೆ!'' ಅಂತ ನಕ್ಕಿದ್ರು. ಈಕೆ ಇನ್ನೂ ಗೇಟ್‌ನಿಂದ ಹೊರಗೆ ಹೋಗ್ತಾ ಇದಾರೆ ಅಂತ ಅಂದು ಕೊಳ್ಳೋದರಲ್ಲಿ ನಮ್ಮ ಬಡಾವಣೆಯ ಅರ್ಚಕರು ಹಾಜರ್ ಆಗ್ಬೇಕೇ! ಕೈನಲ್ಲಿ ಎರಡೋ ಮೂರೋ ನಿಂಬೇಹಣ್ಣುಗಳನ್ನ ತಂದಿದ್ದರು. ನನ್ನ ಹೆಂಡತಿಗೆ, ''ಯಾರೋ ಹೊಸ ಕಾರ್‌ಗೆ ಪೂಜೆ ಮಾಡಿಸೋಕ್ಕೆ ಬಂದಿದ್ರಮ್ಮ ವಿಘ್ನವಿನಾಶಕ್ಕೆ ಅಂತ ನಿಂಬೇಹಣ್ಣುಗಳ ಮೇಲೆ ಕಾರ್ ಓಡಿಸಿದ್ರು. ಎರಡು ಹಣ್ಣುಗಳು ಎಕ್ಸ್‌ಟ್ರಾ ಇದ್ದವು. ಅದಕ್ಕೆ ತಂದೆ. ನಿಮ್ಮ ಯಜಮಾನರಿಗೆ ಪಾನಕ ಮಾಡಿ ಕೊಡಿ. ವಿಟಮಿನ್ 'ಸಿ' ಮೂಳೆಗಳಿಗೆ ಒಳ್ಳೇದು ಅಂತ ಕೊಟ್ಟರು. ನನ್ನ ಹೆಂಡತಿಗೆ ಇನ್ನೂ ಕೋಪ ಮೂಗಿನ ತುದೀಲೇ ಇತ್ತು. ''ಕ್ಯಾಲ್ಷಿಯಮ್ಮೂ ಒಳ್ಳೇದು ಅಂತಾರಲ್ಲಾ, ಅದಕ್ಕೆ ಏನು ಮಾಡಲಿ?'' ಅಂತ ಕೊಂಕಾಗೇ ಕೇಳಿದಳು. ಅರ್ಚಕರಿಗೆ ಕಾಮನ್ ಸೆನ್ಸ್ ಜಾಸ್ತಿ. ''ಊಟ ಆದ ಮೇಲೆ ಚೆನ್ನಾಗಿ ಸುಣ್ಣ ಹಚ್ಕೊಂಡು, ಎಲೆ ಅಡಿಕೆ ಹಾಕ್ಕೊಳ್ಳೋಕ್ಕೆ ಹೇಳಿ ಎಲ್ಲಾ ಸರಿ ಹೋಗುತ್ತೆ'' ಅಂತ ಹರಿಸಿ ಹೋದರು.

ಕೊನೆಗೊಬ್ಬ ನನ್ನ ಬ್ಯಾಚುಲರ್ ಫ್ರೆಂಡ್ ಬಂದ. ಅವನು ''ಸ್ತ್ರೀ ದ್ವೇಶಿ'' ಅಂತ ಪ್ರಖ್ಯಾತನಾಗಿದ್ದ ನನ್ನ ಹತ್ತಿರ ಮೆಲ್ಲಗೆ ಬಂದು ''ಅಲ್ಲಪ್ಪ, ಗಂಡ ಹೆಂಡತಿಯರ ಜಗಳ ಅನ್ನೋದು ಸರ್ವೇ ಸಾಮಾನ್ಯ ಒಪ್ಪಿಕೋತೀನಿ. ಆದರೂ ಜಗಳದಲ್ಲಿ ಗಂಡ ಹೀಗೆ ಕಾಲು ಮುರಿದುಕೊಂಡಿರೋದು ಇದೇ ಮೊದಲನೇ ಕೇಸ್ ಅಂತ ಕಾಣುತ್ತೆ. ನೀನು ಹುಷಾರಾದ ಮೇಲೆ ನಾನು ನಿನ್ನನ್ನು ಒಳ್ಳೇ ಲಾಯರ್ ಹತ್ತಿರ ಕರ್ಕೊಂಡು ಹೋಗ್ತೀನಿ. ಗೆಟ್‌ವೆಲ್‌ಸೂನ್!'' ಅಂತ ನನ್ನ ಭುಜ ಡಿಸ್ ಲೊಕೇಟ್ ಆಗೋ ಹಾಗೆ ಹೊಡೆದು ಹೋದ. ಈ ಸಮಯದಲ್ಲಿ ಸದ್ಯ ನನ್ನ ಹೆಂಡತಿ ಅಡುಗೆ ಮನೆಯಲ್ಲಿ ಇದ್ದಳು. ಅವಳಿಗೆ ಏನು ಅನ್ನಿಸ್ತೋ ಏನೋ! ಒಂದು ಸೂಟ್ ಕೇಸ್ಗೆ ನಮ್ಮಿಬ್ಬರ ಬಟ್ಟೆಗಳನ್ನೂ ತುರುಕಿ ''ನಡೀರಿ, ನಮ್ಮಪ್ಪನ ಮನೇಲಿ ಎರಡು ವಾರ ಇದ್ದು ಬರೋಣ. ನೀವೋ, ನಿಮ್ಮ ಫ್ರಾಕ್ಚರ್ರೋ, ನಿಮ್ಮ ಹಿತೈಷಿಗಳೋ, ನನಗೆ ಸಾಕಾಗಿ ಹೋಯ್ತು!'' ಅಂತ ಹೊರಟಳು. ಸರಿ, ಕುರಿ ತರಹ ಕುಂಟ್ಕೊಂಡೇ ಅವಳ ಹಿಂದೆ ಹೊರಟೆ. ಗೇಟ್ ಹತ್ತಿರ ಬಂದು ಆಟೋಗೆ ಕಾಯ್ತಾ ಇದ್ದಾಗ

ನಮ್ಮ ಮನೆ ಹಾಲಿನವನು ಬಂದ. ''ಮೇಡಂ, ಇವತ್ತು ಅಂಕಲ್‌ಗೆ ಅಂತಾನೇ ಎಮ್ಮೆ ಹಾಲು ತಂದಿದ್ದೀನಿ. ಅದರಿಂದ ಮೂಳೆ ಗಟ್ಟಿಯಾಗುತ್ತಂತೆ'' ಅಂತ ಅಂದ. ''ಥ್ಯಾಂಕ್ಸ್ ಕಣಪ್ಪ. ಇನ್ನು ಹದಿನೈದು ದಿನಗಳ ಕಾಲ ಹಾಲು ತರಬೇಡ. ಇವರಿಗೇನಾದರೂ ಇನ್ನೊಂದು ಸಲ ಮೂಳೆ ಮುರಿದರೆ, ಎಮ್ಮೆ ಹಾಲಿನ ಬಗ್ಗೆ ಯೋಚಿಸ್ತೀನಿ'' ಅಂತ ಅವನನ್ನು ಅಟ್ಟಿ ಹಾಕಿದಳು. ಎರಡು ವಾರಗಳಾದ ಮೇಲೆ ಹುಷಾರಾಗಿ ವಾಪಸ್ಸು ಮನೆಗೆ ಬಂದೆ. ಅಷ್ಟೊಂದು ಜನರ ಶುಭಾಶಯಗಳು ನಿಂಬೇಹಣ್ಣಿನ ಪ್ರಸಾದ - ಇವೆಲ್ಲದರ ಫಲವೋ ಏನೋ, ಮೂಳೆ ಕೂಡಿಕೊಂಡ ಹಾಗಿದೆ!

## ಪುಸ್ತಕ ಪರಿಚಯ




### ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ ಸಾಹಿತ್ಯ
### – ಕು. ಗೋ

ಇದು ಅಪರಂಜಿಯ ಹಿರಿಯ ಬರಹಗಾರರಾದ ಶ್ರೀ ಕು. ಗೋ ಅವರು ಸಂಪಾದಿಸಿದ ಸಂಗ್ರಹ. ಈ ಹಿಂದೆ ಅಪರಂಜಿಯಲ್ಲಿ ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ ಸಾಹಿತ್ಯ ಎನ್ನುವ ಮಾಲೆಯಲ್ಲಿ ಪ್ರಕಟವಾದ ಕು. ಗೋ ಅವರ ಆಯ್ಕೆಯ ಲೇಖನಗಳ ಸಂಗ್ರಹವಿದು. ಪುಸ್ತಕ ರೂಪದಲ್ಲಿ ಹೊರಬಂದಿರುವ ಆ ಎಲ್ಲಾ ಲೇಖನಗಳೂ ಓದುಗರಿಗೆ ಒಂದೇ ಓದಿಗೆ ಸಹಾಯಕವಾಗಿದೆ. ಎಂದಿನಂತೆ ಕು. ಗೋ ಅವರ ಹಾಸ್ಯ ಮನೋಭಾವ ಈ ಎಲ್ಲ ಲೇಖನಗಳನ್ನು ಆಯ್ದುಕೊಳ್ಳುವುದರಲ್ಲಿ ಎದ್ದು ಕಾಣುತ್ತಿದೆ.

### ನಮ್ಮ ಮನೆಯ ಬೆಳಕು
### – ವೈ.ಎನ್. ಗುಂಡೂರಾವ್

ಇದು ಅಪರಂಜಿಯ ಹಿರಿಯ ಲೇಖಕರಾದ ವೈ.ಎನ್. ಗುಂಡೂರಾವ್ ಅವರು ತಮ್ಮ ಜೀವನಾನುಭವವನ್ನು ದಾಖಲಿಸಿರುವ ಪುಸ್ತಕ. ತಮ್ಮ ಚಿಕ್ಕಂದಿನ ದಿನಗಳಿಂದ ಹಿಡಿದು ಇದುವರೆವಿಗೂ ಅವರ ಜೀವನದಲ್ಲಿ ಬಂದಂಥ ಚೇತೋಹಾರಿ ಘಟನೆಗಳನ್ನು ಕುತೂಹಲಕಾರಿಯಾಗಿ ನಿರೂಪಿಸಿದ್ದಾರೆ. ಇದರಲ್ಲಿ ಬಳಸಿರುವ ಭಾಷೆ, ನಿರೂಪಣೆ ತುಂಬಾ ಆಪ್ತವಾಗಿದೆ. ಕೌಟುಂಬಿಕ ಸ್ವಾರಸ್ಯಗಳು, ಹಿರಿಯರನ್ನು ನೋಡಿಕೊಳ್ಳಬೇಕಾದ ರೀತಿನೀತಿಗಳು, ಹೊಂದಿಕೊಂಡು ಬಾಳುವ ವಿಧಾನ, ಇವೆಲ್ಲ ಇಲ್ಲಿ ಸ್ವಾರಸ್ಯವಾಗಿ ನಿರೂಪಿತವಾಗಿದೆ. ಓದಿದ ನಂತರ ಒಂದು ರೀತಿಯ ಪರಿಪೂರ್ಣ ಅನುಭವ ತಂದುಕೊಡುವ ಪುಸ್ತಕ ಇದು.



# ಪರದೇಶದಲ್ಲಿ ವೆಜ್ಜು, ನಾನ್ ವೆಜ್ಜು

**- ಜಿ.ಎಸ್. ನಾಗನಾಥ್**

ಅದೇನ್ ಮಹಾ ಬಿಡ್ರೀ ಅಡುಗೆ ಮಾಡ್ಕೊಳ್ಳೋದು... ಅನ್ನ ಮಾಡೋದಂತೂ ಗೊತ್ತೇ ಇದೆ. ಇನ್ನು ಸಾರು, ಸಾಂಬಾರು ಮಾಡೋದಂತೂ ತುಂಬಾ ಸಿಂಪಲ್. ಎಲ್ಲಾ ಮಸಾಲೆ ಸೇರಿಸಿ ವಗ್ಗರಣೆ ಹಾಕೋದು, ಮರೀದೆ ಉಪ್ಪು, ಬೆಲ್ಲ, ಕೊತ್ತಂಬರಿ, ಕರಿಬೇವು ಹಾಕೋದು ಮತ್ತೆ ಮೇಲೆ ಹಸಿ ಕಾಯಿ ತುರಿ ಸೇರಿಸಿದರೆ ಮುಗೀತು ಅಡುಗೆ ರೆಡಿ. ನಿಮಗೆ ಏನೂ ಪ್ರಾಬ್ಲಂ ಆಗಲ್ಲ ಅಂತ ಧೈರ್ಯ ತುಂಬಿ ಕಳಿಸಿದ್ದಳು ಹೆಂಡತಿ. ಆದರೆ ಮೊದಲ ಬಾರಿ ಅಮೇರಿಕ ಪ್ರವಾಸ ಹೊರಟವನಿಗೆ ಏರ್‌ಪೋರ್ಟು, ಇಮಿಗ್ರೇಷನ್ನು ಇವುಗಳದ್ದೇ ತಲೆಯಲ್ಲಿ ತುಂಬಿ ಕೊಂಡಿದ್ದವನಿಗೆ ಹೆಂಡತಿ ಹೇಳಿದ್ದು ಯಾವ ಕಿವಿಯಲ್ಲಿ ಕೇಳಿಸಬೇಕು? ಅಯ್ಯೋ, ನೀನು ಹೀಗೆ ಒಂದೇ ಉಸಿರಿನಲ್ಲಿ ಹೇಳಿದರೆ ನನ್ ತಲೇಗೆ ಹ್ಯಾಗೇ ಹೋಗುತ್ತೆ? 15 ವರ್ಷಗಳ ಸಂಸಾರದಲ್ಲಿ ರುಬ್ಬೀ ರುಬ್ಬೀ ಕಲಿತದ್ದನ್ನ 1 ನಿಮಿಷದಲ್ಲಿ ಕಿರುಚಿದರೆ ನನಗೆ ನೆನಪಿರುತ್ತೇನೇ? ಒಂದು ಚೀಟಿಯಲ್ಲಿ ಪೂರ್ತಿ ಅಡಿಗೆ, ತಿಂಡಿ ಮಾಡುವ ವಿಧಾನ ಬರೆದು ಅದೇನೇನು ಪದಾರ್ಥ ಬೇಕೋ ಎಲ್ಲವನ್ನೂ ಪ್ಯಾಕ್ ಮಾಡಿ ನನ್ನ ಸೂಟ್ ಕೇಸಿನಲ್ಲಿಡು. ಅಮೇರಿಕಾಕ್ಕೆ ಹೋದ ಮೇಲೆ ಓದಿಕೊಳ್ತೀನಿ ಅಂದೆ.

> **ಉಗ್ರರು ಸೇನಾ ನೆಲೆಗಳನ್ನ ವಶಪಡಿಸಿಕೊಂಡಂತೆ ಅಡಿಗೆ ಮನೆಯನ್ನ ಸಹೋದ್ಯೋಗಿಗಳು ನಾನ್‌ವೆಜ್ ಅಡಿಗೆ ತಯಾರಿಸಲು ತಮ್ಮ ವಶದಲ್ಲಿಟ್ಟುಕೊಂಡಿದ್ದರು!**

ಅಮೇರಿಕಾದ ಅಟ್ಲಾಂಟದಲ್ಲಿ ನನ್ನ ಬ್ಯಾಗಲ್ಲಿ ಫುಡ್ ಐಟೆಮ್ಸ್ ಏನಾದ್ರೂ ಇದೆಯಾ ಅಂತ ಇಮಿಗ್ರೇಷನ್ ಅಧಿಕಾರಿಗಳು ಕೇಳಿದಾಗ ಹೇಳುವುದೋ ಬಿಡುವುದೋ ತಿಳಿಯದೇ ಪಿಳಿ ಪಿಳಿ ಕಣ್ಣು ಬಿಡುತ್ತಿರುವುದನ್ನು ನೋಡಿಯೇ ಅಧಿಕಾರಿಗಳಿಗೆ ತಿಳಿದು ಹೋಯಿತು, ಏನೋ ಇದೆ ಅಂತ. ಅಕ್ಕಿ, ಎಂಟಿಆರ್ ಸಾಂಬಾರ್ ಪುಡಿ, ಸಾರಿನ ಪುಡಿ, ಪುಳಿಯೋಗರೆ ಮಿಕ್ಸ್, ಕೆಲವು ರೆಡಿ ಟು ಈಟ್ ಫುಡ್. ಇಷ್ಟು ಬಿಟ್ಟರೆ ಉಳಿದ ಎಲ್ಲಾ ಪದಾರ್ಥಗಳು ಲೇಬಲ್ ಇಲ್ಲದಿರುವಂಥವು ಎಂದು ಎಲ್ಲಾ ಎತ್ತಿ ಕಸದ ಬುಟ್ಟಿಗೆ ಹಾಕಿದ್ದರು. (ಅದು ನನಗೆ ತಿಳಿದದ್ದು ನಾನು ಮನೆಗೆ ಹೋಗಿ ಸೂಟ್ ಕೇಸ್ ಖಾಲಿ ಮಾಡುವಾಗಲೇ. ಜೊತೆಗೆ ನಿಮ್ಮ ಸೂಟ್ ಕೇಸನ್ನು ತಪಾಸಣೆ ಮಾಡಲಾಗಿದೆ ಎಂಬ ಚೀಟಿ ಬೇರೆ!)

ಇದೆಲ್ಲ ಆಗಿದ್ದು ನಮ್ಮ ಕಂಪೆನಿಯವರು 6 ತಿಂಗಳ ಪ್ರಾಜೆಕ್ಟ್‌ಗೆಂದು ನನ್ನನ್ನು ಅಮೇರಿಕಾಕ್ಕೆ ಕಳಿಸಿಕೊಟ್ಟಾಗ. ಹಿಂದೆಯೂ ಹಲವು ಬಾರಿ ಅಮೇರಿಕಾಗೆ ಹೋಗುವ ಅವಕಾಶ ಬಂದಿದ್ದರೂ ಅಲ್ಲಿ ಸಸ್ಯಾಹಾರಿ ಊಟದ ಸಮಸ್ಯೆ ಆಗುವುದೆಂಬ ಕಾರಣಕ್ಕೆ ಅವಕಾಶವನ್ನು ತಿರಸ್ಕರಿಸುತ್ತಾ ಬಂದಿದ್ದೆ. ಈ ಬಾರಿ ಮಾತ್ರ ಆಗೊಲ್ಲ ಅನ್ನೋಕೆ ಸಾಧ್ಯವೇ ಇರಲಿಲ್ಲ. ಯಾಕೆಂದರೆ ಹೋಗ್ತೀಯಾ, ಇಲ್ವಾ ಅಂತ ನನ್ನ ಕೇಳಲೇ ಇಲ್ಲ! ಒಂದು ದಿನ ಥಣ್ ಅಂತ ಒಂದು

ಈಮೇಲ್ ಬಂದಿತ್ತು. ಅದರಲ್ಲಿ ನಮ್ಮ ಮ್ಯಾನೇಜರ್‌ಗೆ ಅಮೇರಿಕಾದ ಗಿರಾಕಿ ನಾಥ್‌ರ ಪ್ರೊಫೈಲ್ ನಮ್ಮ ಅವಶ್ಯಕತೆಗೆ ಚೆನ್ನಾಗಿ ಮ್ಯಾಚ್ ಆಗುತ್ತೆ. ಇನ್ನೊಂದು ವಾರದಲ್ಲಿ ಅವರು ನಮ್ಮ ಪ್ರಾಜೆಕ್ಟ್‌ಗೆ ಸೇರಲು ಎಲ್ಲಾ ವ್ಯವಸ್ಥೆ ಮಾಡುವುದು ಅಂತ ಬರೆದು ನನಗೆ ಕಾಪಿ ಹಾಕಿದ್ದ. ಆ ಈಮೇಲ್‌ನ ಕೆಳಗಿನವರೆಗೆ ಸ್ಕ್ರೋಲ್ ಮಾಡಿ ನೋಡಿದಾಗ ಕಳೆದ ಒಂದು ತಿಂಗಳಿನಿಂದ ನನ್ನನ್ನ ಅಮೇರಿಕಾಗೆ ಕಳಿಸುವ ಬಗ್ಗೆ ಚರ್ಚೆ ನಡೆಯುತ್ತಿದ್ದು, ಒಂದು ಕಡೆ ಈ ವಿಷಯವನ್ನು ಫೈನಲೈಸ್ ಆಗೋವರ್ಗೂ ಉದ್ಯೋಗಿಗೆ ವಿಷಯ ಗೊತ್ತುಪಡಿಸಬಾರದು ಎಂಬ ನಿಯಮಾವಳಿ ಬೇರೆ ಬರೆದುಕೊಂಡಿತ್ತು. ಎಲ್ಲಾ ತೀರ್ಮಾನವಾದ ಮೇಲೆ ಮತ್ತೆ ಪ್ರಾಜೆಕ್ಟ್ ಮ್ಯಾನೇಜರ್ ಬಳಿ ನಾನ್ ಹೋಗೊಲ್ಲಾ ಅಂತ ಹಠ ಹಿಡಿದು ಕೂತರೆ ಕಂಪೆನಿಯಿಂದ ಒದ್ದು ಹೊರಗೆ ಹಾಕ್ತಾರೆ ಅಷ್ಟೆ!

ನನಗೆ ಪ್ರಪಂಚದಲ್ಲಿ ಅತ್ಯಂತ ಖುಷಿ ಕೊಡುತ್ತಿದ್ದ ಸ್ಥಳವೆಂದರೆ ನನ್ನಾಫೀಸು. ಅದಕ್ಕೆ ಅದರದೇ ಆದ ಕಾರಣಗಳಿವೆ ಬಿಡಿ. ಅಂಥಾ ಆಫೀಸನ್ನು ಬಿಟ್ಟು ಹೋಗುವುದನ್ನು ಕನಸಿನಲ್ಲೂ ಊಹಿಸಲು ಸಾಧ್ಯವಿರಲಿಲ್ಲ. ಅಂತೂ ಬೇರೆ ಗತಿ ಇಲ್ಲದೇ ಅಮೇರಿಕಾಗೆ ಹೊರಡುವುದು ಅನಿವಾರ್ಯವಾಯ್ತು. ಮೂರು ವರ್ಷಕ್ಕೆ ಎಚ್1ಬಿ ಮೊದಲೇ ವೀಸಾ ಮಾಡಿಸಿದ್ದರಿಂದ ಒಂದು ವಾರದಲ್ಲಿ ಪ್ರಯಾಣ ಮಾಡೋದು ಕಷ್ಟವೇನಿರಲಿಲ್ಲ. ನಾನು ಅಮೇರಿಕಾ ಸೇರುವ ಹೊತ್ತಿಗೆ ನಮ್ಮದೇ ಕಂಪೆನಿಯ ಮುಂಬೈ ಶಾಖೆಯಿಂದ ಮತ್ತಿಬ್ಬರು ಸಹೋದ್ಯೋಗಿಗಳು – ಪ್ರಶಾಂತ್, ವೆಂಕಿ – ಅದೇ ಪ್ರಾಜೆಕ್ಟ್‌ಗೆ ನನಗಿಂತ ಒಂದು ತಿಂಗಳು ಮೊದಲೇ ಅಲ್ಲಿಗೆ ಹೋಗಿ 3 ಬೆಡ್ ರೂಮಿನ ಒಂದು ಬಾಡಿಗೆ ಮನೆ ಹಿಡಿದಿದ್ದರು. ಪ್ರಪ್ರಥಮ ಬಾರಿಗೆ ಅಮೇರಿಕಾಗೆ ಕಾಲಿಟ್ಟದ್ದರಿಂದ ನಾನು ಏರ್‌ಪೋರ್ಟಿನಿಂದ ಹೋಟೆಲ್ ಸೇರುವ ಹೊತ್ತಿಗೆ ಅಂದರೆ ರಾತ್ರಿ 10 ಗಂಟೆಗೆ ಅವರಿಬ್ಬರೂ ನನಗಾಗಿ ಕಾಯುತ್ತಾ ಕುಳಿತಿದ್ದರು. ಅಲ್ಲಿಗೆ ಹೋದ ಮೊದಲ ಒಂದು ವಾರ ಕಂಪೆನಿ ಪ್ರಾಯೋಜಿತ ಹೋಟೆಲಿನಲ್ಲಿ ತಂಗಿ ರೆಡಿ ಟು ಈಟ್ ಫುಡ್ ಮೇಲೆ ಅವಲಂಬಿಸಿದ್ದರಿಂದ ಹೊಟ್ಟೆಗೆ ಅಷ್ಟೇನೂ ಕಷ್ಟವಾಗಲಿಲ್ಲ. ಆದರೆ ನಂತರ ನನ್ನ ಗೆಳೆಯರ ಮನೆಗೆ ಗಂಟು ಮೂಟೆ ಕಟ್ಟಿಕೊಂಡು ಸೇರಿಕೊಂಡದ್ದೇ ದೊಡ್ಡ ತಲೆನೋವು ಶುರುವಾಯ್ತು. ಕಾರಣ ಮುಂಬೈನಿಂದ ಬಂದಿದ್ದ ಅವರಿಬ್ಬರೂ ಕಟ್ಟಾ ಮಾಂಸಾಹಾರಿಗಳು! ಮೊದಲೇ ಅವರಿಗೆ ನಾನು ನಾನ್‌ವೆಜ್ ತಿನ್ನೋದಿಲ್ಲ, ತಿನ್ನೋರನ್ನ ನೋಡಿದ್ರೂ ವಾಂತಿ ಬರುತ್ತೆ ಅಂತ ಹೇಳಿದ್ದೆ. ಆದ್ರೆ ಅವಕ್ಕೆ ನಂಬಕ್ಕೇ ಆಗಿರ್ಲಿಲ್ಲ. ಹೇಗಾದ್ರೂ ಮಾಡಿ ನನಗೂ ನಾನ್‌ವೆಜ್ ತಿನ್ನೋದನ್ನ ಕಲಿಸೋಣ ಅಂತ ಎಲ್ಲಾ ಪ್ಲಾನ್ ಮಾಡ್ಕೊಂಡಿದ್ರು. ಅವರ ಪ್ರಕಾರ ನಾನ್ ವೆಜ್‌ನಷ್ಟು ರುಚಿಕರ ಅಡುಗೆ ಬೇರೆ ಇರಲಿಕ್ಕೆ ಸಾಧ್ಯವೇ ಇಲ್ಲ!

ಸರಿ, ಅವರ ಮನೆಗೆ ಕಾಲಿಟ್ಟ ಮೊದಲ ದಿನ ಬ್ರೆಡ್ಡು ಜಾಮ್ ತಿಂದು ಮಲಗಿದ್ದಾಯ್ತು. ಎರಡನೇ ದಿನ ಹೇಗಾದ್ರೂ ಮಾಡಿ ಅನ್ನ ಸಾಂಬಾರ್ ಮಾಡಬೇಕಲ್ಲ ಅನ್ನಿಸ್ತು. ಆದರೆ ಎಲ್ಲಿ, ಹೇಗೆ ಮಾಡೋದು? ಉಗ್ರರು ಸೇನಾ ನೆಲೆಗಳನ್ನ ವಶಪಡಿಸಿಕೊಂಡಂತೆ ಅಡಿಗೆ ಮನೆಯನ್ನ ನನ್ನಿಬ್ಬರು ಸಹೋದ್ಯೋಗಿ ಕಂ ಸ್ನೇಹಿತರು ನಾನ್‌ವೆಜ್ ಅಡಿಗೆ ತಯಾರಿಸಲು ತಮ್ಮ ವಶದಲ್ಲಿಟ್ಟುಕೊಂಡಿದ್ದಾರೆ! ಜೊತೆಗೆ ಏನೇನೋ ಮಸಾಲೆ, ಎಂಥದೋ ವಾಸನೆ, ನನ್ನ ಪರಿಸ್ಥಿತಿ

ಯಾರಿಗೂ ಬೇಡ. ಜೊತೆಗೆ ಹೊಟ್ಟೆ ಬೇರೆ ಚುರುಗುಟ್ಟುತ್ತಾ ಇದೆ. ಅದೂ ಅಲ್ಲದೇ ಅವರಿಬ್ಬರೂ ನನಗೆ ನಾನ್‌ವೆಜ್ ಅಡುಗೆ ರುಚಿ ತೋರಿಸಲು ಕಾದಿದ್ದಾರೆ. ರಾತ್ರಿ ಹನ್ನೊಂದು ಗಂಟೆಗೆ ಅವರಿಬ್ಬರೂ ಅಡಿಗೆ, ಊಟ ಮುಗಿಸಿ ತಮ್ಮ ತಮ್ಮ ಕೊಠಡಿಗಳನ್ನ ಸೇರಿಕೊಂಡರು. ಆಗ ನಾನು ಅಡಿಗೆ ಮನೆಗೆ ಹೋಗಿ ಅವರು ಗಲೀಜು ಮಾಡಿದ್ದ ಸ್ಟೋವ್, ಕಟ್ಟೆ ಎಲ್ಲಾ ಒರೆಸಿಕೊಂಡು ಒಂದರಲ್ಲಿ ಅನ್ನಕ್ಕೆ ಇಟ್ಟೆ ಇನ್ನೊಂದು ಸ್ಟೋವ್‌ನಲ್ಲಿ ತೊಗರಿಬೇಳೆ ಕುದಿಯಲು ಇಟ್ಟೆ. ಹೆಂಡತಿ ಕೊಟ್ಟ ಚೀಟಿಗಾಗಿ ಹುಡುಕಿದರೆ ಅದು ಎಲ್ಲೂ ಇಲ್ಲ... (ಆಮೇಲೆ ತಿಳಿಯಿತು ಅದು ಬೆಂಗಳೂರಿನ ಮನೆಯಲ್ಲೇ ಇತ್ತು ಅಂತ) ಹೆಂಡತಿ ಹೇಳಿದ ಮಸಾಲೆ ಪದಾರ್ಥಗಳಾವುವೂ ಇಲ್ಲ. ಏನೋ ಒಂದು, ಹೇಗೋ ಒಂದು ಅಂತ ಕುದಿಯುತ್ತಿರುವ ಬೇಳೆಗೆ ಟೊಮೇಟೋ, ಈರುಳ್ಳಿ ಸೇರಿಸಿ ಉಪ್ಪು ಹಾಕಿ ಕುದಿಯಲು ಬಿಟ್ಟೆ. ಕಡೆಗೆ ಅಲ್ಲೇ ಮೂಲೆಯಲ್ಲಿ ಕುಳಿತಿದ್ದ ಕಾಯಿ ಹಾಲಿನ ಟಿನ್ (ಅಲ್ಲೆಲ್ಲಾ ಹಸಿ ಕಾಯಿ, ಕೊಬ್ಬರಿ ಬದಲಿಗೆ ಅಡಿಗೆಗೆ ಕಾಯಿ ಹಾಲು ಬಳಸುತ್ತಾರೆ) ಕಾಣಿಸ್ತು. ಅದನ್ನೂ ಸೇರಿಸಿದೆ. ಇದ್ದಕ್ಕಿದ್ದಂತೆ ಘಂ ಅಂತ ವಾಸನೆ ಬರೋಕೆ ಶುರುವಾಯ್ತು. ಅಂತೂ ಅಡುಗೆ ರೆಡಿ ಆಗಿ ನಾನು ಮೊದಲ ಪ್ರಯತ್ನವಾಗಿ ಮಾಡಿದ್ದ ಅನ್ನ ಸಾಂಬಾರ್ ಊಟ ಮಾಡೋ ಹೊತ್ತಿಗೆ ರಾತ್ರಿ 12 ಗಂಟೆ. ಆದರೆ ಇದಾಗಿ 5 ವರ್ಷಗಳು ಕಳೆದರೂ ಇನ್ನೂ ಚೆನ್ನಾಗಿ ನೆನಪಿದೆ. ಅವತ್ತು ಮಾಡಿದ ಸಾಂಬಾರ್ ತುಂಬಾ ರುಚಿಯಾಗಿದ್ದು, 3 ಬಾರಿ ಕಲೆಸಿಕೊಂಡು ತಿಂದರೂ ಇನ್ನೂ ಬೇಕೆನಿಸುವಂತಿತ್ತು. ಮತ್ತೆ ಸಾಂಬಾರಿಗೆ ನಾನೇನೂ ಬೆಲ್ಲ ಹಾಕಿಲ್ಲ, ಕೊತ್ತಂಬರಿ ಇಲ್ಲ, ಕರಿಬೇವು ಇಲ್ಲ, ಒಗ್ಗರಣೆ ಅಂತೂ ಇಲ್ಲವೇ ಇಲ್ಲ... ಆದರೂ ಅಷ್ಟು ಚೆನ್ನಾಗಿ ಹೇಗೆ ಆಯಿತು? 15 ವರ್ಷಗಳ ಕಾಲ ವೈವಾಹಿಕ ಜೀವನದಲ್ಲಿ ನನ್ನವಳ ಕೈಯಿಂದ ಮಾಡಿದ ಅಡಿಗೆಗಿಂತಲೂ ಒಂದು ಲೆವೆಲ್ ಜಾಸ್ತಿಯೇ ರುಚಿಯಿಂದ ಕೂಡಿತ್ತು, ಟೊಮೆಟೋ-ಈರುಳ್ಳಿ ಸಾಂಬಾರು. ಒಬ್ಬನಿಗೆ ಎಷ್ಟು ಪ್ರಮಾಣ ಸಾಂಬಾರು ಮಾಡಬೇಕೆಂದು ತಿಳಿಯದೇ 2-3 ದಿನಕ್ಕಾಗುವಷ್ಟು ಮಾಡಿಟ್ಟುಬಿಟ್ಟಿದ್ದೆ! ಚೆನ್ನಾಗಿ ಆಗಿದ್ದರಿಂದ ಇನ್ನೆರಡು ದಿನಕ್ಕೆ ಊಟದ ಸಮಸ್ಯೆ ಇಲ್ಲ ಅಂತ ಫ್ರಿಜ್ಜಿನಲ್ಲಿ ಇಟ್ಟು ಮಲಗಿದೆ.



ಪ್ರಶಾಂತ್, ವೆಂಕಿ ನಾನು ನಾನ್ ವೆಜ್ ತಿನ್ನುವುದಿಲ್ಲ ಎಂದರೂ ಹಸಿವು ತಡೆಯಲಾರದೆ ಕಡೆಗೆ ತಿಂದೇ ತಿನ್ನುತ್ತೇನೆಂದು ನನಗೋಸ್ಕರ ಪಾತ್ರೆಯಲ್ಲಿ ಮುಚ್ಚಿಟ್ಟಿದ್ದರಂತೆ. ಆದರೆ ಅದಕ್ಕೆ ಬದಲಾಗಿ ನಾನು ಮಾಡಿದ ಸಾಂಬಾರ್‌ನ ವಾಸನೆ ರಾತ್ರಿಯೆಲ್ಲಾ ಮನೆ ತುಂಬಾ ಹರಡಿ ಬೆಳಿಗ್ಗೆ ನಾನು ಏಳುವ ಮುಂಚೆಯೇ ಬೆಳಗಿನ ಉಪಹಾರಕ್ಕೆ ಮಾಮೂಲಿನ ಬ್ರೆಡ್ಡು, ಜಾಮ್ ಬಿಟ್ಟು ನಾನು ಮಾಡಿ ಉಳಿಸಿದ್ದ ಅನ್ನ, ಸಾಂಬಾರ್ ಕಲೆಸಿಕೊಂಡು ಚೆನ್ನಾಗಿ ಕತ್ತರಿಸಿದ್ದರು! ಅಷ್ಟೆ ಒಂದೇ ದಿನಕ್ಕೆ ಮುಂಬೈನ ಹೈಕಳು ದಕ್ಷಿಣ ಭಾರತದ ಸಾಂಬಾರಿಗೆ ಸೋತು ಹೋಗಿಬಿಟ್ಟರು.

ನಂತರ 2-3 ದಿನ ಹೀಗೇ ನಡೆಯಿತು. ಮೊದಲು ಅವರು ನಾನ್‌ವೆಜ್ ಅಡಿಗೆ ಮಾಡಿಕೊಳ್ಳೋರು, ನಂತರ ನನ್ನ ಅನ್ನ ಸಾಂಬಾರು ಅಥವಾ ಅನ್ನ ರಸಂ ಅಥವಾ ಪುಳಿಯೋಗರೆ ಹೀಗೆ ನಡೆದಿತ್ತು ನನ್ನ ಜೀವನ. ಆದರೆ ಒಂದು ವಿಚಾರ ಮಾತ್ರ ಅರ್ಥವಾಗಿರಲಿಲ್ಲ. ನನ್ ಹೆಂಡ್ತಿ ಪಾಪ, ಅಷ್ಟೆಲ್ಲಾ ಕಷ್ಟ ಪಟ್ಕೊಂಡು ನೂರಾ ಎಂಟು ಮಸಾಲೆ ಸೇರಿಸಿ ಮಾಡಿದ ಸಾಂಬಾರಿಗೂ, ಕೇವಲ 2-3 ಪದಾರ್ಥಗಳನ್ನು ಸೇರಿಸಿ ತಯಾರಿಸಿದ ಸಾಂಬಾರಿಗೂ ಎಷ್ಟೊಂದು ವ್ಯತ್ಯಾಸ! ನಾನು ತಯಾರಿಸಿದ ಸಾಂಬಾರೇ ತುಸು ಹೆಚ್ಚು ರುಚಿಕಟ್ಟಾಗಿರ್ತಿತ್ತು. ಇನ್ನು ಪ್ರಶಾಂತ್ ಹಾಗೂ ವೆಂಕಿಗೂ ನಾನ್ ವೆಜ್ ಅಡಿಗೆಗಿಂತಲೂ ನಾನು ಮಾಡುವ ರಸಂ, ಸಾಂಬಾರ್, ಪುಳಿಯೋಗರೆ ಇವುಗಳಿಗೇ ಗಂಟು ಬಿದ್ದು ಒಂದೇ ವಾರದಲ್ಲಿ ನಾನ್‌ವೆಜ್ ಊಟಕ್ಕೆ ಟಾಟಾ ಬೈ ಬೈ ಹೇಳಿದರು. ಆದರೆ ಅದೇಕೋ ಅವರಿಬ್ಬರೂ ಎಷ್ಟೋ ಬಾರಿ ತಾವೇ ಸಾಂಬಾರ್ ಅಥವಾ ರಸಂ ಮಾಡೋಕೆ ಹೋಗಿ ಏನು ಮಾಡಿದರೂ ನಾನು ತಯಾರಿಸುತ್ತಿದ್ದ ರುಚಿ ಬರುತ್ತಿರಲಿಲ್ಲ. ಕಡೆಗೆ ಪ್ಯೂರ್ ನಾನ್ ವೆಜ್ ರೆಸ್ಟೋರೆಂಟ್ ಆಗಿದ್ದ ಮನೆ ಪ್ಯೂರ್ ವೆಜ್ ರೆಸ್ಟೋರೆಂಟ್ ಆಗಿ ಯಶಸ್ವೀ 5 ತಿಂಗಳು ಕಾಲ ಓಡಿತು - ರಾಜ್ ಕುಮಾರ್ ಸಿನೆಮಾಗಳ ಹಾಗೆ. ಕಡೆಗೆ ನನ್ನ ಸಾಂಬಾರ್‌ನ ಪರಿಮಳ ಆಫೀಸಿನಲ್ಲೆಲ್ಲಾ ಹರಡಿ ವೀಕೆಂಡ್ ಪಾರ್ಟಿಗಳಲ್ಲೆಲ್ಲಾ ನನ್ನ ಒಂದು ಸಾಂಬಾರ್ ಕೂಡ ಊಟದ ಮೆನುವಿನಲ್ಲಿ ಸೇರಿ ಕಡೆಗೆ ಎಲ್ಲಕ್ಕಿಂತ ಎತ್ತರದ ಸ್ಥಾನ ಗಳಿಸಿಕೊಳ್ಳುವಲ್ಲಿ ಯಶಸ್ವಿಯಾಯಿತು!

ಈಗಲೂ ಪ್ರಶಾಂತ್ ಮುಂಬೈನಿಂದ ಫೋನ್ ಮಾಡಿದಾಗೆಲ್ಲಾ ನನ್ನ ಸಾಂಬಾರು, ರಸಂ ರುಚಿಯನ್ನು ನೆನೆಸಿಕೊಳ್ಳುತ್ತಾನೆ ಮತ್ತು ಅದರ ರೆಸಿಪಿ ಮತ್ತೆ ಮತ್ತೆ ಕೇಳುತ್ತಾನೆ. ನಾನು ಅಮೆರಿಕಕ್ಕೆ ಹೋಗುವ ಮುನ್ನ ನನ್ನ ಹೆಂಡತಿಯನ್ನ ಕೇಳುತ್ತಿರಲಿಲ್ಲವೇ? ಹಾಗೆ. ಆದರೆ ಅವನಿಗೆ ಅಸಾಧ್ಯ ಅನುಮಾನ. ನಾನು ಅವನಿಗೆ ಹೇಳದ ಯಾವುದೋ ಒಂದು ಪದಾರ್ಥ ಸೇರಿಸುತ್ತೇನೆ, ಅದಕ್ಕೇ ಸಾಂಬಾರು ಅಷ್ಟೊಂದು ರುಚಿಕಟ್ಟಾಗಿರುತ್ತೆ ಅದೇನದು ಹೇಳು ಅಂತ ಪೀಡಿಸುತ್ತಾನೆ.

ಆದರೆ ಇವತ್ತಿನವರೆಗೂ ನನ್ನ ಹೆಂಡತಿಗೆ ನನ್ನ ಸಾಂಬಾರ್ ಕತೆ ಬರೀ ಕತೆಯಂತೆಯೇ ಅನ್ನಿಸಿದೆ. ಅಲ್ಲಿಂದ ಬಂದ ಮೇಲೆ ಒಮ್ಮೆಯಾದರೂ ಅದೇ ಸಾಂಬಾರ್ ಮತ್ತೊಮ್ಮೆ ಮನೆಯಲ್ಲಿ ಮಾಡಿ ತೋರಿಸೋಣವೆಂದರೆ ಆಗಿಲ್ಲ. ಅಥವಾ ಅದಕ್ಕೆ ನನ್ ಹೆಂಡ್ತಿ ಅವಕಾಶ ಕೊಟ್ಟಿಲ್ಲ ಅಂದರೂ ಸರಿ.

# ಕೊರವಂಜಿ ಪದಬಂಧ – 19

- ವಿದ್ಯಾ ವಿ. ಹಾಲಭಾವಿ



**ಎಡದಿಂದ ಬಲಕ್ಕೆ**

1. ಉದಯ ಕಾಲದಲ್ಲಿ ಹಿಡಿದಿಟ್ಟ ನೀರು (3)
3. ನಸುಕಿನಲ್ಲಿ ಬಿದ್ದ ಸ್ವಪ್ನ (3)
4. ಮಡಿವಂತಿಕೆಗೆ ಬೇಕೇ ಈ ಮಣ್ಣಿನ ಪಾತ್ರೆ? (3)
6. ಆತ ವಿಚಾರಿಸಿದ್ದು, ರಾಮನ ಹಿರಿ ಮಗನ ಕ್ಷೇಮ (3)
7. ಕವಾಡಿಗನದ್ದೂ, ಇದೇ ಸಂಪ್ರದಾಯವಂತೆ! (3)
9. ಪಾಪ! ಇನ್ನೂ ಕರುವಲ್ಲವೇ ಅದಕ್ಕೇ ಈ ದಯೆ (3)
11. ನಗರದವರೆಲ್ಲರೂ ಜರೂರಾಗಿ ಒಪ್ಪಿಸಿದ ಕಾಣಿಕೆ (3)
13. ಹೇಳಿದ ದಿನದೊಳಗೇ ಬಂದನಲ್ಲ, ಈ ಮಂತ್ರಿ! (3)
15. ಪ್ರವಾಸದಲ್ಲಿರುವವ, ತತ್ವಜ್ಞಾನಿಯಂತೆ! (3)
17. ಲಂಗ ಹಿಡಿದಿಹನಲ್ಲಾ ಈ ದುರಾಚಾರಿ! (3)
18. ವರ್ತಮಾನವನ್ನು ತಿಳಿಸುವ ವ್ಯಾಪಾರಿ (3)
19. ವಸತಿಯಲ್ಲಿ ಮುನಿದು ತಿರುಗಿಬಿಟ್ಟಳಲ್ಲಾ ಈ ಉಪಪತ್ನಿ (3)

**ಮೇಲಿಂದ ಕೆಳಕ್ಕೆ**

1. ಆ ಕೂಸು ಕುಳಿತಿದ್ದು ಈ ಮರಳ ಮೇಲೆಯೇ (3)
2. ಕಮಂಡಲ ಬಳಿಯಿರುವ ತಾವರೆ (3)
3. ಕರವನ್ನು ಕಡಿಯಲು ಬಂದಿದೆಯಲ್ಲಾ ಈ ಭಲ್ಲೂಕ! (3)
5. ಹೆಸರು ಕೇಳಿದ್ದಕ್ಕೇ ಈ ರಾಡಿಯೇ? (3)
7. ಮನದಲ್ಲಿ ಅಂದುಕೊಂಡಂತೆ ಬಂದಿಹನಲ್ಲಾ ಈ ಕುಳ್ಳ! (3)
8. ಕೆನ್ನೆ ಮೇಲೇ ಹರಿದಿದೆ ಈ ನೆತ್ತರು! (3)
9. ಮುಸಲ್ಮಾನರ ಪ್ರಾರ್ಥನಾ ಸ್ಥಳ (3)
10. ದನಕ್ಕಾಗಿಯೇ ನಡೆಯಿತಲ್ಲಾ ಈ ಯುದ್ಧ! (3)
12. ಜಲ ತರುವುದೇ ಇಷ್ಟ ತೊಡಕು (3)
14. ಈತ ಓದುಗ (3)
15. ಪ್ರತಿಯೊಳಗೆ ತೋರಿಸಿದ ಏಣಿಗೆ (3)
16. ದವಸವನ್ನೆಲ್ಲಾ ತಂದ ದಿನ (3)

*(ಉತ್ತರಕ್ಕೆ 40ನೇ ಪುಟ ನೋಡಿ)*

# ಹ್ಯಾಮ್ಲೆಟ್ ಹಿರಿಯಣ್ಣನ ಡಯಟಿಂಗ್ ಪ್ರಸಂಗ

**- ಡಾ|| ಸಿ.ಕೆ.ಎನ್. ರಾಜ**

**ತ**ರ್ಲೆ ಕುಂಟ್ನಳ್ಳಿಯ ಎಂ.ಜಿ. ರೋಡಿನಲ್ಲಿರುವ ಜನಾರ್ದನ ಭವನ ಮಸಾಲೆ ದೋಸೆಗೆ ತುಂಬಾ ಪ್ರಸಿದ್ಧವಾದದ್ದು. ಇತ್ತೀಚೆಗೆ ತಾನೆ ಅದಕ್ಕೆ ಭೇಟಿ ನೀಡಿದ್ದ ಸಿಹಿ ಕಹಿ ಚಂದ್ರು ರುಚಿಕರವಾದ ಆ ಮಸಾಲೆ ದೋಸೆಯನ್ನು ಸವಿದು ಕುಣಿಗಲ್ ಕುದುರೆಯಂತೆ ಕೆನೆದು ಪ್ರಶಂಸೆಯ ಮಹಾಪೂರವನ್ನೇ ಹರಿಸಿದ್ದನ್ನು ಕಂಡ ನಮ್ಮ ತ.ಕುಂ. ಹಿರಿಯಣ್ಣ ಅದೇ ದಿನ ಸಂಜೆಯೇ ಅದೇ ಹೋಟೆಲಿಗೆ ಹಾಜರಾಗಿ ಡಬ್ಬಲ್ ಮಸಾಲೆ + ಬೆಣ್ಣೆ ಪ್ಲೇನ್ ದೋಸೆ + ಒಂದು ಪ್ಲೇಟ್ ಗೋಡಂಬಿ ಹಾಕಿದ ಈರುಳ್ಳಿ ಪಕೋಡವನ್ನು ಸವಿದದ್ದು ಇತಿಹಾಸವೆಂದೇ ಹೇಳಬೇಕು.

**ಮಿತಿಯಾಗಿ ತಿಂದು ಬದುಕುವುದೇ ಅಥವಾ ಅತಿಯಾಗಿ ತಿಂದು ಸಾಯುವುದೇ?**

ಅಂದಹಾಗೆ, ನಾನಿಲ್ಲಿ ಓದುಗನ ಕ್ಷಮೆ ಯಾಚಿಸಬೇಕು. ಯಾರೀ ಹಿರಿಯಣ್ಣ? ಅವನಿಗೂ ಮಸಾಲೆ ದೋಸೆಗೂ ಇರುವ ಸಂಬಂಧವಾದರೂ ಏನು? ಇತ್ಯಾದಿ ಪ್ರಶ್ನೆಗಳು ಓದುಗನಲ್ಲಿ ಏಳುವುದು ಸ್ವಾಭಾವಿಕ.

ಹಿರಿಯಣ್ಣ ಯಾರೂಂತೀರಿ? ಪಂಪಾಪುರದ ಲೇಟ್ ಸೆಟ್‌ದೋಸೆ ಬೆಣ್ಣೆ ಭರಮಣ್ಣನವರ ಮಗ ಲೇಟ್ ಮಸಾಲೆ ಮೈಲಾರಯ್ಯನವರ ಇನ್ನೂ ಜೀವಂತವಾಗಿರುವ ನಲವತ್ತರ ಹರೆಯದ ಸುಪುತ್ರ. ಹಾಲಿ ವಾಸವಾಗಿರುವುದು ತರ್ಲೆ ಕುಂಟ್ನಳ್ಳಿಯಲ್ಲಿ, ಕಟ್ಟಾ ಬ್ರಹ್ಮಚಾರಿ, ಕಸುಬು ಹೋಟೆಲುಗಳಲ್ಲಿ ವಿಧ-ವಿಧವಾದ, ರುಚಿ-ರುಚಿಯಾದ ತಿಂಡಿ ಸವಿಯುವುದು. ಎತ್ತರ ಐದಡಿ ನಾಲ್ಕಂಗುಲ, ಹೊಟ್ಟೆ ಸುತ್ತಳತೆ 49 ಇಂಚು. ತೂಕ ಕೇವಲ 105 ಕೇಜಿಗಳು. ನಿರಂತರ ಹಸನ್ಮುಖಿ, ಅರಳು ಹುರಿದಹಾಗೆ ಮಾತು. ಇದೇ ನಮ್ಮ ಮಸಾಲೆ ಹಿರಿಯಣ್ಣನ್ನ ''ಭಯೋ'' ಪ್ರೊಫೈಲ್.

ಕೂತು ತಿಂದರೂ ಕರಗದಷ್ಟು ಆಸ್ತಿ ಹಿರಿಯಣ್ಣನಿಗಿತ್ತು. ಬದುಕಿರುವುದೇ ತಿನ್ನುವುದಕ್ಕಾಗಿ ಎನ್ನುವ ತತ್ವದ ಪ್ರತಿಪಾದಕ. ಅವನು ಸೆಟ್ ದೋಸೆ ತಿನ್ನುವ ವೈಖರಿ ಅಮೋಘ. ಅರ್ಧ ದೋಸೆಯ ಮಧ್ಯೆ ಚಟ್ನಿ, ಪಲ್ಯವನ್ನು ಬಾಯಿ ತುಂಬಾ ಹಾಕಿಕೊಂಡು ಆರು ಕಂತಿನಲ್ಲಿ ಪ್ಲೇಟ್ ಖಾಲಿ ಮಾಡುತ್ತಿದ್ದ. ತಿನ್ನುವಾಗ ತೃಪ್ತಿಯಿಂದ ತಲೆಯಾಡಿಸುತ್ತಾ ''ಆಹಾ, ಇಂತಹ ರುಚೀನಾ ಬೇರಾವ ಹೋಟೆಲಲ್ಲೂ ಕಾಣೆ'' ಎಂದು ದಾಸರ ಶೈಲಿಯಲ್ಲಿ ಹೊಗಳುತ್ತಾ ತಿನ್ನುವ ರೀತಿಯೇ ಅವರ್ಣನೀಯ. ಎಷ್ಟೋ ದಿನ ಅವನು ಜನಾರ್ದನ ಭವನ್‌ಗೆ ಬಂದು ತನ್ನದೇ ಆದ ಸೀಟ್‌ನಲ್ಲಿ ಕುಳಿತು ತನ್ನ ಪರಮಾಪ್ತ ಸರ್ವರ್ ಯಂಕ್ಟೂಗೆ ''ಯಂಕ್ಟೂ, ಒಂದು ಪ್ಲೇಟ್ ಚಟ್ನಿ, ನೆಂಚ್ಕೊಳ್ಳೊದಕ್ಕೆ ಸೆಟ್ ಮಸಾಲೆ ತಂದ್ಬುಡು. ಅದು ತರುವವರೆಗೆ ಸುಮ್ನೆ ಹೇಗೆ ಕುಳಿತಿರುವುದು? ಒಂದು ಬೋಂಡ ಸೂಪ್ ತಂದಿಟ್ಬುಡು'' ಅನ್ನುತ್ತಿದ್ದ. ಬೋಂಡ ತಿನ್ನುವಾಗ

ಮಾಲೀಕ ಐತಾಳರಿಗೆ ‘‘ರೀ ಐತಾಳರೇ, ನಿಮ್ಮ ಹೋಟೆಲಿನ ತಿಂಡಿ ಹದವೇ ಹದ, ನಾನೇನಾದರೂ ವಿಜಯನಗರದ ಕೃಷ್ಣದೇವರಾಯನಾಗಿದ್ದರೆ ನಿಮ್ಮ ಕೈಗೆ ಚಿನ್ನದ ತೋಡ ಹಾಕ್ತಿದ್ದೆ’’ ಅನ್ನುತ್ತಿದ್ದ. ಐತಾಳರೂ ನಗುತ್ತಲೇ ಯಂಕ್ಟೂಗೆ ‘‘ಇನ್ನೆರಡು ಕಪ್ ಸೂಪ್ ತಂದಿಡೋ’’ ಅನ್ನುತ್ತಿದ್ದರು. ಹೀಗಿತ್ತು ಹಿರಿಯಣ್ಣನ ದರ್ಬಾರು.

ಆದರೆ ಪ್ರತಿದಿನವೂ ಭಾನುವಾರವಾಗಲು ಸಾಧ್ಯವೇ? ಒಂದು ದಿನ ಬೆಳಗ್ಗೆ ಹಿರಿಯಣ್ಣನಿಗೆ ಎದೆ ನೋವು ಕಾಣಿಸಿತು. ಉಸಿರಾಟಕ್ಕೆ ತೊಂದರೆಯಾಯಿತು. ನರ್ಸಿಂಗ್ ಹೋಮಿಗೆ ದಾಖಲಾದ. ಇಂತಹ ಕೋಲಾರದ ಚಿನ್ನದ ಗಣಿ ತಮಗೆ ಸಿಕ್ಕಿದಾಗ ನರ್ಸಿಂಗ್ ಹೋಮಿನವರು ಬಿಡುವರೇ? ಮಾಡಬೇಕಾದ/ಮಾಡಬಾರದ/ಮಾಡಲೇಕೂಡದ ಟೆಸ್ಟ್‌ಗಳು, ಸ್ಕ್ಯಾನ್‌ಗಳು, ತುರ್ತು ಚಿಕಿತ್ಸಾ ಘಟಕ ದರ್ಶನ ಮತ್ತು ಇ.ಸಿ.ಜಿ., ಎಕೊ ಟೆಸ್ಟ್ ಮಾಡಿದ್ದಾಯಿತು. ಇಪ್ಪತ್ತೆರಡು ದಿನಗಳ ನಂತರ ಡಿಸ್‌ಚಾರ್ಜ್ ಆದ ಹಿರಿಯಣ್ಣ ಕಂಗಾಲಾಗಿ ಹೋದ. ವೈದ್ಯರುಗಳು ಅವನು ತಿನ್ನುವುದಕ್ಕೆ ಕಡಿವಾಣ ಹಾಕಿದರು. ದಿನಕ್ಕೆ 1200 ಕ್ಯಾಲರಿ ಮೇಲೆ ಸೇವಿಸಕೂಡದೆಂದು ಕಟ್ಟಾಜ್ಞೆ ಮಾಡಿದರು. ವಿದೇಶಗಳಲ್ಲಿ ಕತ್ತೆ, ಕುದುರೆ, ಜೀಬ್ರಾಗಳು ತಿನ್ನುವ ಓಟ್ಸ್ ಮಾತ್ರ ತಿನ್ನಬೇಕೆಂದು ಹೇಳಿ ಒಂದು ಡಯಟಿಂಗ್ ಪಟ್ಟಿಯನ್ನೇ ಹಿರಿಯಣ್ಣನ ಮುಂದಿಟ್ಟರು. ತಾವು ಹೇಳಿದ್ದನ್ನು ಕೇಳದಿದ್ದರೆ ಹೃದಯಾಘಾತ, ಪಾರ್ಶ್ವವಾಯು ಗ್ಯಾರಂಟಿ ಎಂದು ಬೆದರಿಸಿದರು.

ಆಗಲೇ ನಾನು ತರ್ಲೆ ಕುಂಟ್ನಳ್ಳಿಗೆ ‘‘ನರಿಕೂಗು’’ ಪತ್ರಿಕೆ ಪರವಾಗಿ ಬಂದು, ಐತಿಹಾಸಿಕ ವ್ಯಕ್ತಿಯಾದ ಹಿರಿಯಣ್ಣನನ್ನು ಭೇಟಿಯಾಗಲು ಅವನ ಮನೆಗೆ ಹೋಗಿದ್ದು. ಆಗ ಬೆಳಗ್ಗೆ ಒಂಭತ್ತು ಘಂಟೆ. ಹಿರಿಯಣ್ಣ ಡೈನಿಂಗ್ ಟೇಬಲ್ ಮುಂದೆ ಕೂತಿದ್ದ. ಟೇಬಲ್ ಮೇಲೆ ತಟ್ಟೆಗಳಲ್ಲಿ ಪಾಲಕ್ ಸೊಪ್ಪಿನ ಚೂರುಗಳು, ಸೌತೆಕಾಯಿ, ಕ್ಯಾರೆಟ್ ಚೂರುಗಳಿದ್ದವು. ಘಮಘಮ ಎನ್ನುವ ಮಸಾಲೆಯೆಲ್ಲಿ? ಬೇಯಿಸಿದ ಮರದ ಹೊಟ್ಟಿನಂತಿರುವ ಓಟ್ಸ್ ಎಲ್ಲಿ? ಹಿರಿಯಣ್ಣನವರ ಕಣ್ಣುಗಳಲ್ಲಿ ಅಶ್ರುಧಾರೆ!

ನಾನು ಕಂಡಂತೆ, ಹಿರಿಯಣ್ಣ ಲಾರೆನ್ಸ್ ಒಲಿವಿಯರ್ ಶೈಲಿಯಲ್ಲಿ ಕುಳಿತುಕೊಂಡು ಹ್ಯಾಮ್ಲೆಟ್ಟನಂತೆ ‘‘ಡಯಟಿಂಗ್ ಆರ್ ಟು ಡೈ ಈಟಿಂಗ್’’ (ಮಿತಿಯಾಗಿ ತಿಂದು ಬದುಕುವುದೇ ಅಥವಾ ಅತಿಯಾಗಿ ತಿಂದು ಸಾಯುವುದೇ?) ಎಂದು ನೊಂದುಕೊಳ್ಳುತ್ತಿದ್ದ.

ಸಂದರ್ಶನ ಮುಗಿಸಿ ಹೊರನಡೆದೆ.

**ಕಲಿತ ಪಾಠ**

ಕಚೇರಿಯಿಂದ ಮನೆಗೆ ಹೋಗುತ್ತಿದ್ದ ಒಬ್ಬ ಕಾರು ಚಾಲಕನನ್ನು ಸೀಟ್ ಬೆಲ್ಟ್ ಹಾಕಿಕೊಂಡಿಲ್ಲ ಎಂದು ಪೊಲೀಸಪ್ಪ ಹಿಡಿದು ಚಲನ್ ನೀಡಿದ. ಎರಡು ದಿನಗಳ ನಂತರ ಅದೇ ಜಾಗದಲ್ಲಿ ಅದೇ ಪೊಲೀಸಪ್ಪನಿಗೆ ಮತ್ತೆ ಸಿಕ್ಕಿ ಬಿದ್ದ. ಏನು ಕಲಿತೆ ಇದರಿಂದ ಎಂದು ಪೊಲೀಸಪ್ಪ ತುಂಟನಗೆಯೊಡನೆ ಕೇಳಿದ. ನಾಳೆಯಿಂದ ಬೇರೆ ರಸ್ತೆ ಹಿಡಿಬೇಕು ಎಂದು ಕಲಿತೆ ಎಂದ ಚಾಲಕ.

ಶುಂಠಿ ಕಷಾಯ

# ದುಡಿತದ ಮಿಡಿತ

**- ಬೇಲೂರು ರಾಮಮೂರ್ತಿ**

**ಒ**ಬ್ಬ ವಿಶ್ವವಿದ್ಯಾನಿಲಯದಲ್ಲಿ ಚೆನ್ನಾಗಿ ಓದಿ ವಿದ್ಯಾವಂತನಾದವನು ಒಂದು ಪ್ರಖ್ಯಾತ ಕಂಪನಿಯಲ್ಲಿ ವ್ಯವಸ್ಥಾಪಕರ ಹುದ್ದೆಗೆ ಸಂದರ್ಶನಕ್ಕೆ ಹೋದ. ಮೊದಲನೆಯ ಸಂದರ್ಶನದಲ್ಲಿ ಅವನು ಪಾಸಾದ. ನಂತರ ನಿರ್ದೇಶಕರ ಬಳಿ ಸಂದರ್ಶನಕ್ಕೆ ಕರೆ ಬಂತು. ನಿರ್ದೇಶಕರು ಆ ಹುಡುಗನ ಅರ್ಹತಾ ಪತ್ರಗಳನ್ನೂ, ಶೈಕ್ಷಣಿಕ ಪ್ರಗತಿಯನ್ನೂ ಕೂಲಂಕುಷವಾಗಿ ನೋಡಿ ಅಚ್ಚರಿಪಟ್ಟರು. ಏಕೆಂದರೆ ಆ ಹುಡುಗ ಮಾಧ್ಯಮಿಕ ಶಾಲೆಯಿಂದ ಹಿಡಿದು ಅತ್ಯುನ್ನತ ಪರೀಕ್ಷೆಯವರೆವಿಗೂ ಒಂದು ವರ್ಷವೂ ಬಿಡದಂತೆ ಪ್ರತಿ ವರ್ಷವೂ ಚೆನ್ನಾಗಿ ನಂಬರು ತೆಗೆದುಕೊಂಡು ಪಾಸಾಗಿದ್ದ.

ನಿರ್ದೇಶಕರು ಪರವಾಗಿಲ್ಲ ಚೆನ್ನಾಗಿ ಓದಿ ವಿದ್ಯಾವಂತನಾಗಿದ್ದೀಯ. ನಿಮ್ಮ ತಂದೆ ನಿನಗೆ ಸ್ಕೂಲಿನ ಕಾಲೇಜಿನ ಫೀಸ್ ಕೊಟ್ಟು ನಿನ್ನನ್ನು ಓದಿಸಿದ್ದು ಸಾರ್ಥಕವಾಗಿದೆ ಅಂದರು. ಅದಕ್ಕೆ ಆ ಹುಡುಗ ಇಲ್ಲ ಸಾರ್, ನನ್ನ ತಂದೆ ನಾನು ಚಿಕ್ಕ ವಯಸ್ಸಿನಲ್ಲಿರುವಾಗಲೇ ತೀರಿಕೊಂಡರು. ನನ್ನ ತಾಯಿಯೇ ಕಷ್ಟ ಪಟ್ಟು ಸಂಪಾದಿಸಿ ನನ್ನನ್ನು ಓದಿಸಿರುವುದು ಎಂದ. ನಿರ್ದೇಶಕರು ಅಚ್ಚರಿಯಿಂದ ಹೌದಾ, ನಿನ್ನ ತಾಯಿ ಯಾವ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದರು ಅಂತ ಕೇಳಿದರು. ಅದಕ್ಕೆ ಆ ಹುಡುಗ ನನ್ನ ತಾಯಿ ಲಾಂಡ್ರಿಯವನ ಬಳಿ ಬಟ್ಟೆ ಒಗೆಯುವ ಕೆಲಸ ಮಾಡುತ್ತಿದ್ದಳು ಸರ್. ನಿರ್ದೇಶಕರು ಅಚ್ಚರಿಯಿಂದ ಎಲ್ಲಿ ನಿನ್ನ ಕೈ ತೋರಿಸು ಎಂದರು. ಹುಡುಗ ಕೈ ಒರೆಸಿಕೊಂಡು ತೋರಿಸಿದ. ಆ ಹುಡುಗನ ಕೈ ಬಹಳ ಮೃದುವಾಗಿತ್ತು. ಕಷ್ಟಪಟ್ಟು ಕೆಲಸ ಮಾಡಿದ ಯಾವ ಗುರುತುಗಳೂ ಇರಲಿಲ್ಲ.

ನಿರ್ದೇಶಕರು ಹುಡುಗನನ್ನೇ ನೋಡುತ್ತಾ ನೀನು ನಿನ್ನ ತಾಯಿ ಬಟ್ಟೆ ಒಗೆಯುವುದಕ್ಕೆ ಯಾವಾಗಲಾದರೂ ಸಹಾಯ ಮಾಡಿದ್ದುಂಟಾ ಅಂತ ಕೇಳಿದರು. ಅದಕ್ಕೆ ಹುಡುಗ ಇಲ್ಲ ಸರ್, ನನ್ನ ತಾಯಿ ನನ್ನನ್ನು ಆ ಕೆಲಸಗಳನ್ನು ಮಾಡೋಕೆ ಬಿಡುತ್ತಲೇ ಇರಲಿಲ್ಲ. ಯಾವಾಗಲೂ ನೀನು ಚೆನ್ನಾಗಿ ಓದಬೇಕು, ಮುಂದೆ ಬರಬೇಕು, ದೊಡ್ಡ ಹುದ್ದೆ ಅಲಂಕರಿಸಬೇಕು, ಚೆನ್ನಾಗಿ ಸಂಪಾದನೆ ಮಾಡಬೇಕು ಅನ್ನುತ್ತಿದ್ದಳು. ಇದರ ಜೊತೆಗೆ ನನ್ನ ತಾಯಿ ನನಗಿಂತ ವೇಗವಾಗಿ ಮತ್ತು ಸ್ವಚ್ಛವಾಗಿ ಬಟ್ಟೆಗಳನ್ನು ಒಗೆಯುತ್ತಾಳೆ ಅಂದ.

ನಿರ್ದೇಶಕರ ಕಣ್ಣಲ್ಲಿ ನೀರು ಬಂತು. ಆದರೂ ತೋರಿಸಿಕೊಳ್ಳದೇ, ಇವತ್ತು ಸಂದರ್ಶನ ಇಲ್ಲಿಗೆ ಮುಗಿಯಿತು. ನೀನು ಇವತ್ತು ಮನೆಗೆ ಹೋಗು. ನಂತರ ನಿನ್ನ ತಾಯಿಯ ಕೈಯನ್ನು ಚೆನ್ನಾಗಿ ತೊಳೆದು ಶುಭ್ರಗೊಳಿಸು ನಂತರ ನಾಳೆ ಬೆಳಗ್ಗೆ ಬಂದು ನನ್ನನ್ನು ನೋಡು ಅಂದರು.

ಹುಡುಗನಿಗೆ ಇದೇಕೆಂದು ಅರ್ಥವಾಗದಿದ್ದರೂ ಅವನ ಒಳಮನಸ್ಸಿನಲ್ಲಿ ಬಹುಶಃ ನನಗೆ ಇಲ್ಲಿ ಕೆಲಸ ಸಿಗೋ ಸಂಭವ ಹೆಚ್ಚು ಅನಿಸಿತು. ಮನೆಗೆ ಹೋದೊಡನೇ ತಾಯಿಯ ಎದುರು

ಕೂತು ಅಮ್ಮಾ ಎಲ್ಲಿ ನಿನ್ನ ಕೈ ಕೊಡು, ಇವತ್ತು ನಾನು ನಿನ್ನ ಕೈಗಳನ್ನು ಸ್ವಚ್ಛಗೊಳಿಸಬೇಕು ಅಂದ. ತಾಯಿಗೆ ಮಗನ ಕೋರಿಕೆ ವಿಚಿತ್ರ ಎನಿಸಿತು. ಕುತೂಹಲದಿಂದ ಮಗನನ್ನು ನೋಡಿದಳು. ನಂತರ ಎರಡೂ ಕೈಗಳನ್ನು ಮಗನ ಮುಂದೆ ಚಾಚಿದಳು.

ತಾಯಿಯ ಕೈಗಳನ್ನು ಸ್ವಚ್ಛಗೊಳಿಸುತ್ತಾ ಹೋದಂತೆ ಹುಡುಗನಿಗೆ ಕಣ್ಣಲ್ಲಿ ನೀರು ಬಂತು. ಏಕೆಂದರೆ ತಾಯಿಯ ಎರಡೂ ಅಂಗೈಗಳು ಸುಕ್ಕುಗಟ್ಟಿದ್ದವು. ಹೆಚ್ಚಿನ ಕೆಲಸವಾದ್ದರಿಂದ ಅಲ್ಲಲ್ಲಿ ಗಂಟುಗಳೂ ಮೂಡಿದ್ದವು. ಒಂದೊಂದು ಕಡೆ ಸಣ್ಣ ಪುಟ್ಟ ಗಾಯಗಳೂ ಆಗಿದ್ದವು. ಮಗ ಕೈಯನ್ನು ತೊಳೆಯುತ್ತಿದ್ದಾಗ ಅವಳ ಕೈ ಸಣ್ಣಗೆ ನಡುಗುತ್ತಿತ್ತು. ಅದನ್ನು ಹುಡುಗನೂ ಗಮನಿಸಿದ.

ಆ ಹುಡುಗನಿಗೆ ಅವತ್ತೇ ಅರ್ಥವಾಗಿದ್ದು ಏನೆಂದರೆ ತಾಯಿಯ ಈ ಕೈಗಳೇ ತನ್ನನ್ನು ಇಷ್ಟು ವರ್ಷ ಓದಿಸಿದ್ದು. ಪ್ರತೀ ದಿನವೂ ರಾಶಿ ರಾಶಿ ಬಟ್ಟೆಗಳನ್ನು ಒಗೆದ ಈ ಕೈಗಳಿಂದಲೇ ನಾನು ಶಾಲೆಯ ಫೀಸ್ ಕೊಡಲು ಸಾಧ್ಯವಾದದ್ದು. ಈ ಗಾಯಗಳು ನಾನು ಇಷ್ಟು ವರ್ಷ ಓದಿದ್ದಕ್ಕೆ, ವಿಶ್ವವಿದ್ಯಾನಿಲಯದ ಓದಿನಲ್ಲಿ ಮುಂದೆ ಬಂದದ್ದಕ್ಕೆ ಮತ್ತು ನನ್ನ ಭವಿಷ್ಯಕ್ಕೆ ತಾಯಿ ಕೊಟ್ಟ ಅತೀ ಹೆಚ್ಚಿನ ಬೆಲೆ ಎನಿಸಿತು. ಆ ದಿನ ತಾಯಿಯ ಕೈಗಳನ್ನು ಸ್ವಚ್ಛಗೊಳಿಸಿದ ಮೇಲೆ ಉಳಿದಿದ್ದ ಬಟ್ಟೆಗಳನ್ನು ಹುಡುಗನೇ ಒಗೆದು ಹಾಕಿದ. ಇಷ್ಟೆಲ್ಲ ನಡೆಯುವಾಗಲೂ ತಾಯಿ ತನ್ನ ಮಗನನ್ನು ಅಚ್ಚರಿಯಿಂದಲೇ ನೋಡುತ್ತಿದ್ದಳು.

ಆ ದಿನ ರಾತ್ರಿ ಊಟವಾದ ಮೇಲೆ ತಾಯಿ ಮಗ ಇಬ್ಬರೂ ತಾವು ಬೆಳೆದು ಬಂದ ದಾರಿಯ ಬಗೆಗೆ ಬಹಳ ಹೊತ್ತು ಮಾತಾಡುತ್ತಲೇ ಇದ್ದರು.

ಮರುದಿನ ಬೆಳಗ್ಗೆ ಆ ಹುಡುಗ ಮತ್ತೆ ನಿರ್ದೇಶಕರ ಬಳಿ ಹೋದ. ಅವರು ಅವನನ್ನು ಕೂತುಕೊಳ್ಳಲು ಹೇಳಿ ಅವನ ಮುಖವನ್ನೇ ನೋಡುತ್ತಾ ಈಗ ಹೇಳು ನೆನ್ನೆ ನಿನ್ನ ಮನೆಯಲ್ಲಿ ನೀನು ಏನು ಮಾಡಿದೆ ಮತ್ತು ನೆನ್ನೆ ನೀನು ಕಲಿತ ಪಾಠವೇನು? ಅಂತ ಕೇಳಿದರು.

ನೆನ್ನೆ ನಾನು ಮನೆಗೆ ಹೋದ ಮೇಲೆ ನನ್ನ ತಾಯಿಯ ಎರಡೂ ಕೈಗಳನ್ನು ಸ್ವಚ್ಛಗೊಳಿಸಿದೆ ಮತ್ತು ಉಳಿದಿದ್ದ ಬಟ್ಟೆಗಳನ್ನು ನಾನೇ ಒಗೆದು ಹಾಕಿದೆ.

ನಿರ್ದೇಶಕರ ಕಣ್ಣುಗಳು ಅರಳಿದವು. ಅವರು ಹೌದಾ, ಹಾಗಾದರೆ ನಿನ್ನ ಭಾವನೆಗಳೇನು ಅಂತ ಹೇಳುವಿಯಾ? ಅಂತ ಕೇಳಿದರು.

ಯುವಕ ಹೇಳಿದ ಮೊದಲನೆಯದಾಗಿ ಹೊಗಳುವುದು ಎಂದರೆ ಏನೆಂದು ನನಗೆ ನೆನ್ನೆ ತಿಳಿಯಿತು. ನನ್ನ ತಾಯಿ ಇಲ್ಲದಿದ್ದರೆ ನಾನು ಇವತ್ತು ಇಷ್ಟು ಯಶಸ್ವಿಯಾಗುತ್ತಿರಲಿಲ್ಲ. ಎರಡನೆಯದಾಗಿ ಜೊತೆಯಲ್ಲಿ ಕೆಲಸ ಮಾಡುತ್ತಾ, ನನ್ನ ತಾಯಿಗೆ ಸಹಾಯ ಮಾಡುತ್ತಿರುವಾಗ ಏನಾದರೂ ಕೆಲಸ ಮಾಡುವುದು ಎಷ್ಟು ಕಷ್ಟ ಅಂತ ಅರಿವಾಯಿತು ಮತ್ತು ಮೂರನೆಯದಾಗಿ ಕುಟುಂಬದಲ್ಲಿ ಸೌಹಾರ್ದಯುತ ಸಂಬಂಧಗಳು ಎಷ್ಟು ಮುಖ್ಯ ಮತ್ತು ಅವುಗಳ ಮೌಲ್ಯ ಏನು ಎನ್ನುವುದನ್ನು ಅರಿತುಕೊಂಡೆ.

ಆಗ ಆ ನಿರ್ದೇಶಕರು ಇದನ್ನೇ ನಾನು ನಿನ್ನಲ್ಲಿ ನಿರೀಕ್ಷೆ ಮಾಡುತ್ತಿದ್ದುದು. ನಾನು ಇಲ್ಲಿ ಕೆಲಸ ಕೊಡುವ ವ್ಯಕ್ತಿಗೆ ತನ್ನ ನೌಕರರ ಸಹಾಯವನ್ನು ಶ್ಲಾಘಿಸುವ ಗುಣವಿರಬೇಕು, ತನ್ನೊಂದಿಗೆ ಕೆಲಸ ಮಾಡುವ ನೌಕರರ ಶ್ರಮವನ್ನು ಅರ್ಥಮಾಡಿಕೊಂಡು ಹೊಗಳುವ ಮನಸ್ಸಿರಬೇಕು, ಜೊತೆಗೆ ಅವರ ಕಷ್ಟಗಳೇನು ಎನ್ನುವುದನ್ನು ಅರಿಯುವ ಮನಸ್ಸಿರಬೇಕು ಮತ್ತು ಅಂತಹ ವ್ಯಕ್ತಿ ಬರೀ ದುಡ್ಡಿಗೆ ತನ್ನ ಜೀವನದಲ್ಲಿ ಪ್ರಾಧಾನ್ಯತೆ ಕೊಡುವವನಾಗಿರಬಾರದು ಅಂತ. ಈ ಮೂರೂ ಗುಣಗಳು ನಿನ್ನಲ್ಲಿ ಇವೆ ಅಂತ ನನಗೆ ಅರಿವಾಗಿದೆ. ನಿನಗೆ ಈ ಕಂಪನಿಯಲ್ಲಿ ಕೆಲಸ ಸಿಕ್ಕಿದೆ ಎಂದರು.

ನಂತರ ಈ ಹುಡುಗ ತನಗೆ ಕೆಲಸ ಕೊಟ್ಟ ಕಂಪನಿಯಲ್ಲಿ ಕಷ್ಟಪಟ್ಟು ಕೆಲಸ ಮಾಡುತ್ತಾ ಬಂದು ತನ್ನೊಂದಿಗೆ ಕೆಲಸ ಮಾಡುವ ಎಲ್ಲ ಸಹೋದ್ಯೋಗಿಗಳ ಗೌರವ, ಮೆಚ್ಚುಗೆ ಗಳಿಸಿಕೊಂಡ. ಪ್ರತಿಯೊಬ್ಬ ಕೆಲಸಗಾರನೂ ಒಂದು ಗುಂಪಿನಂತೆ ಕೆಲಸ ಮಾಡಿದ. ಇದರಿಂದಾಗಿ ಕಂಪನಿ ಹೆಚ್ಚಿನ ವ್ಯಾಪಾರ ವಹಿವಾಟು ನಡೆಸಿ ಚೆನ್ನಾಗಿ ಲಾಭ ಸಂಪಾದನೆ ಮಾಡಿತು.

✺

---

## ಎಚ್ಚರಿಕೆ ಇದೆಯಲ್ಲಾ!

ಮ್ಯಾಗಿ ವಿಷಕಾರಿ, ಪ್ರಾಣಕ್ಕೆ ಹಾನಿಕರ ಎಂಬ ವಿಷಯ ನ್ಯಾಯಾಲಯದ ಮೆಟ್ಟಿಲು ಏರಿತು. ಗ್ರಾಹಕರೊಬ್ಬರು ಕಂಪನಿಯ ವಿರುದ್ಧ ಮೊಕದ್ದಮೆ ಹೂಡಿದ್ದರು. ಅವರ ಪರ ವಕೀಲರು ವಾದಿಸುತ್ತಾ ''ಮೈ ಲಾರ್ಡ್ ಈ ಉತ್ಪನ್ನ ವಿಷಕಾರಿ ಎಂದಿದ್ದರೂ ಅದರ ಬಗ್ಗೆ ಗ್ರಾಹಕರಿಗೆ ಕಂಪನಿ ಏನೂ ಮಾಹಿತಿ ನೀಡಿಲ್ಲ, ಎಚ್ಚರಿಕೆ ಸಂದೇಶ ಮುದ್ರಿಸಬೇಕಿತ್ತು" ಎಂದರು.

"ಅಬ್ಜೆಕ್ಷನ್ ಮೈ ಲಾರ್ಡ್ ನಾವು ಎಚ್ಚರಿಕೆ ಸಂದೇಶ ನೀಡಿದ್ದೇವೆ?" ಎಂದರು ಕಂಪನಿ ವಕೀಲರು.

"ಎಲ್ಲಿದೆ ಅದು ತೋರಿಸಿ."

"ಅದೇ ಮೈ ಲಾರ್ಡ್ ಎಕ್ಸ್‌ಪೈರಿ ಡೇಟ್ ಇದೆಯಲ್ಲ.." ಎಂಬ ಉತ್ತರ ಬಂದಿತು.

*– ಬಾಬು*

# ಅಪರಂಜಿಗೆ ಹಾರ್ದಿಕ ಶುಭಾಷಯಗಳು

## ಡಾ. ಎಚ್.ಎಸ್. ಮುರಳಿ

ನೇತ್ರ ವೈದ್ಯರು

**ದಿ ಐ ಕ್ಲಿನಿಕ್**

ಅಣ್ಣಯ್ಯ ಕಾಂಪ್ಲೆಕ್ಸ್

ಹೊಸಳ್ಳಿ ರಸ್ತೆ, ಮಂಡ್ಯ

ಫೋನ್: 224834

ಸಮಯ: ಬೆಳಗ್ಗೆ 9 ರಿಂದ 1 ಗಂಟೆ

**ಮಾಲಸ ಐ ಕ್ಲಿನಿಕ್**

ಬಸ್ ಸ್ಟಾಂಡ್ ಸರ್ಕಲ್

ಚಾಮುಂಡೀಪುರಂ

ಮೈಸೂರು 570 004

ಫೋನ್: 2332225

ಸಮಯ: ಸಂಜೆ 5 ರಿಂದ 8 ಗಂಟೆ

ಮೊಬೈಲ್: 94487 40093

# ಮ್ಯಾಗಿಗೊಂದು ಸಬ್‌ಸ್ಟಿಟ್ಯೂಟ್

- ಇ.ಆರ್. ರಾಮಚಂದ್ರನ್

**ಟಿ**ವಿ ನೋಡುತ್ತಿದ್ದ ಅಜ್ಜಿ 'ಏನೋ ಇದು ಅನ್ಯಾಯ' ಅಂತ ಉದ್ಗರಿಸಿದರು.

ಅಜ್ಜಿ ಸಾಮಾನ್ಯವಾಗಿ ಉದ್ಗರಿಸೋದು ಕಡಿಮೇನೆ. ಅವರ ಫ್ರೆಂಡ್ಸ್ ಜೊತೆ ವಾಕಿಂಗ್‌ಗೆ ಹೋದಾಗ ಮುನಿಸಿಪಾಲಿಟಿ ಕೃಪೆಯಿಂದ ಫುಟ್‌ಪಾಥ್ ಒಂದಾಳು ಸಲೀಸಾಗಿ ಬೀಳುವಂತೆ ಗೋರಿ ತೋಡಿದ್ದರೆ ಅಥವಾ ಟಿವಿಯಲ್ಲಿ ಹೋದ ವರ್ಷ ಒಬ್ಬೊಬ್ಬರಾಗಿ ಮಿನಿಸ್ಟರ್‌ಗಳು ನಾ ಮುಂದು ತಾ ಮುಂದು ಅಂತ ಸ್ಕ್ಯಾಮಿನಲ್ಲಿ ಶಾಮೀಲಾಗಿದ್ದಾಗ ಮಾತ್ರ ದೊಡ್ಡ ಉದ್ಗಾರ ತೆಗೆಯೋವ್ರು.

'ಏನಾಯಿತಜ್ಜಿ?'

> **ಅಮಿತಾಬ್ ಬಚ್ಚನ್, ಮಾಧುರಿ ದೀಕ್ಷಿತ್ ಅವರೆಲ್ಲಾ ತಿನ್ನಾ, 'ನೀವೂ ತಿನ್ನಿ ಆರೋಗ್ಯಕ್ಕೆ ಒಳ್ಳೇದು' ಅಂತ ಹೇಳಿದ್ದೆಲ್ಲಾ ಸುಳ್ಳೇ ಹಾಗಿದ್ದರೆ?**

'ಮ್ಯಾಗಿ ನೂಡಲ್‌ನವರು ಮನೆಹಾಳ್ರು! ಎಲ್ಲ ಪ್ಯಾಕೆಟ್ನಲ್ಲೂ ಎಮ್.ಎಸ್.ಜಿ. ಅನ್ನೋ ವಿಷ ಹಾಕೀದಾರಂತಲ್ಲೋ.. ಅದು ತಿಂದ್ರೆ ಬುದ್ಧಿ ಬೆಳೆಯುವುದಿಲ್ಲ ಅಂತ ನಮ್ಮ ಸಾಫ್ಟ್‌ವೇರ್ ಸೀತಮ್ಮ ಹೇಳ್ತಿದ್ದರು. ನಿಮ್ಮ ಮರಿ ಮಗನಿಗೆ ದಿನಾ ತಿನ್ನಿಸ್ತೀರಾ? ಅವನಿಗೂ ನಿಮ್ಮ ಮೊಮ್ಮಗನ ಹಾಗೇನೆ ಬುದ್ಧಿ ಮಂದ ಆಗಲ್ವಾಂತ ಕೇಳಿದ್ರು. ನಮ್ಮನೆಗೆ ಮ್ಯಾಗಿ ಯಾವತ್ತೂ ತಂದಿಲ್ವಲ್ಲ...? ಯಾಕೆ ಹೀಗೆ ಹೇಳಿದ್ರೋ... ನನಗೆ ಹೆದರಿಕೆ ಆಗ್ತಿದೆ.'

'ಅಜ್ಜಿ! ನಿನ್ನ ತರಲೆ ಫ್ರೆಂಡು ನನ್ನ ಏನೂಂತ ಅಂದ್ಕೊಂಡಿದಾರೇ? ಇರ್ಲಿ, ಅದು ಮಾನೋ ಸೋಡಿಯಂ ಗ್ಲೂಟಮೇಟ್ ಅಂತ.'

'ಹೋಟಲ್ನಲ್ಲಿ ಹೊಟ್ಟೆ ಬೇಗ ತುಂಬ್ಲೀಂತ ರೈಸ್ ಪ್ಲೇಟ್ಗೆ ಧಾರಾಳವಾಗಿ ಸೋಡ ಹಾಕ್ತಾರಲ್ಲೋ! ಊಟ ಆದ್ಮೇಲೆ ಕೂಡ ಸೋಡ ಕುಡೀತಾರಲ್ಲಾ, ಅದ್ರಿಂದ ಕೆಡಕೇನಿಲ್ಲ ಅಲ್ವಾ?'

'ಅಜ್ಜಿ! ನೀನು ಸೋಡ ಮೇಲೆ ಥೀಸೀಸ್ ಮಾಡ್ತಾ ಇದೀಯ! ಅದರ ಜೊತೆ ವಿಸ್ಕೀನೂ ಸೇರಿಸ್ಕೊ. ಅದ್ರ ಮಜಾನೇ ಬೇರೆ.'

'ಥೂ ಮನೆ ಹಾಳ!'

'ಅದು ಸೋಡ ಅಲ್ಲ ಸೋಡಿಯಂ ಅಜ್ಜಿ. ಎಮ್.ಎಸ್.ಜಿ. ಜಾಸ್ತಿ ಆದ್ರೆ ಲೆಡ್ ಅಥವ ಸೀಸ ನಮ್ಮ ದೇಹಕ್ಕೆ ಸೇರುತ್ತೆ. ಅದರಿಂದ ಬೆಳೆಯೋ ಮಕ್ಕಳ ಮೆದುಳಿಗೆ ಹಾನಿಕರ. ಮುಂದೆ ಯಾವ್ಯಾವುದೋ ರೋಗ ವಕ್ರುಸುತ್ತೆ.'

‘ಇಷ್ಟು ವರ್ಷ ಇದು ಯಾರಿಗೂ ಗೊತ್ತಿರಲಿಲ್ವೆ? ಸೀತಮ್ಮ ಇದೂ ಹೇಳಿದ್ರು; ಕಂಪನಿಯವರು ಪಬ್ಲಿಕ್‌ಸಿಟಿಗೆ 450 ಕೋಟಿ, ರಿಸರ್ಚ್‌ಗೆ ಕೇವಲ 19 ಕೋಟಿ ಖರ್ಚು ಮಾಡಿದ್ರಂತೆ! ಟೀವಿಲಿ ಅಮಿತಾಬ್ ಬಚ್ಚನ್, ಮಾಧುರಿ ಅವರೆಲ್ಲಾ ತಿನ್ತಾ, ನೀವೂ ತಿನ್ನಿ ಆರೋಗ್ಯಕ್ಕೆ ಒಳ್ಳೇದು ಅಂತ ಹೇಳಿದ್ರಲ್ಲೋ!’

‘ಹೌದು ಅಜ್ಜಿ. ಪಬ್ಲಿಸಿಟಿ, ಪಬ್ಲಿಕ್‌ಸಿಟಿ ಅಲ್ಲ!’

‘ಏನೋ ಸುಡುಗಾಡು! ತಿನ್ನೋ ಹಾಗೆ ತೋರ್ಸಿ, ದುಡ್ಡಿಸ್ಕೊಂಡು ನಮಗೆಲ್ಲಾ ನೀವು ತಿನ್ನಿ ಅಂತ ಉಪದೇಶ ಮಾಡ್ತಿದ್ರು!’

‘ಹಾಗೇ ಅನ್ಸುತ್ತೆ ಅಜ್ಜಿ. ಅವರ ಮೇಲೆ ಕೇಸು ಹಾಕಿದಾರೆ.’

‘ಕೇಸು ಹಾಕಿ, ಬಲೀ ಹಾಕ್ಬೇಕು, ಇವ್ರನೆಲ್ಲಾ.’

‘ಹೌದಜ್ಜಿ.’

‘ಅದಿರ್ಲಿ, ನಮ್ಮಲ್ಲೇ ಬೆಳೆಯುವ ಮಕ್ಕಳು, ದೊಡ್ಡೋವ್ರು ತಿನ್ನಕ್ಕೆ ಬೆಳಗಿನ ಉಪಹಾರ ಎಷ್ಟಿದೆ.. ಒಂದೇ ಎರಡೇ.. ಉಪ್ಪಿಟ್ಟು, ಇಡ್ಲಿ, ವಡೆ, ದೋಸೆ, ಶ್ಯಾವಿಗೆ... ಶ್ಯಾವಿಗೇಲೇ ಹತ್ತು ತರಹ... ನಿಂಬೆಹಣ್ಣಿನ ಶ್ಯಾವಿಗೆ, ಗೊಜ್ಜು ಶ್ಯಾವಿಗೆ, ತೆಂಗಿನ ಕಾಯಿ ಶ್ಯಾವಿಗೆ, ಕೇಸರಿಭಾತ್ ಶ್ಯಾವಿಗೆ, ಶ್ಯಾವಿಗೆ ಪಾಯ್ಸ.. ಅವರಲ್ಲಿರೋದು ಬರೀ ಒಂದು ಮ್ಯಾಗಿ ನೂಡಲ್ಸ್ ಅಷ್ಟೆ! ಅದರಲ್ಲಿ ಏನೇನೋ ಪ್ರಾಬ್ಲಂಸ್ ಬೇರೆ!’

‘ಕರೆಕ್ಟ್ ಅಜ್ಜಿ.’

‘ಇನ್ನೊಂದು... ನಮ್ಮಲ್ಲಿ ಸುಮಾರು ಬೆಳೆಯೋ ಮಕ್ಕಳು ಪೀಚು ಪೀಚಾಗಿ ಇರುತ್ವೆ. ನೀನೂ ಹಾಗೆ ಇರ್ತಿದ್ದೆ. ನನ್ನ ರಾಮಬಾಣ ಜ್ಞಾಪಕವಿದೆಯಾ? ಚೂರು ಮಾಡಿದ ಖರ್ಜೂರಾನ ಹುರಿಗಡಲೆ ಹಿಟ್ಟಿನೊಂದಿಗೆ ಸೇರಿಸಿ, ಬಾಳೆಹಣ್ಣು, ಹಾಲು ಮತ್ತು ಸಕ್ಕರೆ ಜೊತೆಗೆ ಬೆರಸಿ, ಪ್ರತಿದಿನ ಬೆಳಿಗ್ಗೆ ಹುರಿಯಿಟ್ಟಿನ ಜೊತೆ ಕೊಡ್ತಿದ್ದೆ. ಅದು ತಿಂದೆ ಈಗ ನೀನು ಗೂಳಿ ಹಾಗೆ ಬೆಳೆದಿದ್ದೀಯ!’

‘ನನ್ನ ಗೂಳಿ ಅಂತಿಯಾ?’

‘ಮತ್ತಿನೇನು ಕರೀಬೇಕು... ಆಮೇಲೆ... ನಿಮ್ಮಪ್ಪ ನಿಗೆ ಇದ್ದಕ್ಕಿದ್ದಂತೆ ಜ್ಞಾಪಕ ಶಕ್ತಿ ಕಡಿಮೆ ಆಯ್ತು. ಆಫೀಸಿನಲ್ಲಿ ಊಟ ಮಾಡ್ದೆ ಟಿಫನ್ ಕ್ಯಾರಿಯರ್ನ ಮನೇಗೆ ಹಾಗೇ ತರೋವ್ನು. ಇನ್ನೊಂದ್ಸಲ ಮನೇಲಿ ಟಿಫನ್ ಕ್ಯಾರಿಯರ್ ಮರ್ತು ಬೇರೇ ಯಾರ್ದೋ ಟಿಫನ್ ತಿಂದು ಫಜೀತಿ ಮಾಡ್ಕೊಂಡಿದ್ದ!’

‘ಅಯ್ಯೋ!’

‘ನಾನು ಅಶ್ವಥ್ಥಾಮ ಲೇಹ್ಯಾನ ಮಾಡಿ ಪ್ರತಿ ದಿನಾ ಬೆಳಿಗ್ಗೆ ಗೊಜ್ಜವಲಕ್ಕಿ, ಅಕ್ಕಿರೊಟ್ಟಿ ಉಪ್ಪಿಟ್ಟು ಜೊತೆ ಕೊಡ್ತಿದ್ದೆ.’

‘ಅಶ್ವಥ್ಥಾಮ ಲೇಹ್ಯ?’

‘ಒಂದು ಟಿ ಚಮಚದಲ್ಲಿ ಶುದ್ಧ ತುಪ್ಪ, ಇನ್ನೊಂದರಲ್ಲಿ ಬಿಳಿ ಈರುಳ್ಳಿ ರಸ, ಮತ್ತೊಂದರಲ್ಲಿ ಜೇನುತುಪ್ಪ, ಮೂರು ಸೇರಿಸಿ ಅದಕ್ಕೆ ಒಂದು ಕೋಳಿ ಮೊಟ್ಟೆ ಒಡೆದು ಅದರ ರಸ ಸೇರಿಸಿ, ಕಲಕಿ, ಗೊಜ್ಜವಲಕ್ಕಿಗೆ ಹಾಕಿ ಕೊಡ್ತಿದ್ದೆ. ಮೂರು ತಿಂಗಳಲ್ಲಿ ಅವನ ಬುದ್ಧಿ ಆನೆಯ ಬುದ್ಧಿ ತರಹ ಚಿಗುರಿ ಕುದುರೆ ಓಟದ ಹಾಗೆ ಓಡೋದು. ಆವಾಗ್ನಿಂದ ಆಸಾಮಿ ಏನೂ ಮರೀತಿರ್ಲಿಲ್ಲ.’

‘ನೀನು ಅಪ್ಪನಿಗೆ ಕೋಳಿ ಮೊಟ್ಟೆ ಕೊಟ್ಟೆಯಾ?’

‘ಅದು ನಾನೇ ರಿಸರ್ಚ್ ಮಾಡಿ ಹಾಕ್ದೆ. ನಿಮ್ಮಪ್ಪನ ಬುದ್ಧಿ ಮುಖ್ಯಾನೋ ನನ್ನ ಮಡಿ ಮುಖ್ಯಾನೋ? ಅವನಿಗೆ ಎಲ್ಲಿ ಬುದ್ಧಿ ಭ್ರಮಣೆಯಾಗುತ್ತೋ ಅಂತ ಹೆದರಿದ್ದೆ. ಸಧ್ಯ ಸರಿಯಾದ. ಅದಿರ್ಲಿ.... ನಮ್ಮಲ್ಲಿ ಎಂಥಾ ರುಚಿಯಾದ ತಿಂಡಿಗಳಿವೆ. ತಾಲಿಪಿಟ್ಟು, ಗುಳ್ಳಾವಟೆ, ಪುಳ್ಳಂಗಾಯ್ ಉಂಡೆ. ಹೋಗಿ ಹೋಗಿ ಮ್ಯಾಗಿನ ಯಾಕೆ ತಿನ್ಬೇಕು?’

‘ಅಜ್ಜಿ! ನೀನು ಮಾಡೋದ್ರಲೆಲ್ಲಾ ಬೆಸ್ಟು ಗಸಗಸೆ ಪಾಯ್ಸ! ಪೂಜೆಗೆ ಕರೆದ ಬ್ರಾಹ್ಮಣರಿಗೆಲ್ಲಾ ನೀನು ಊಟಕ್ಕೆ ಬಡಿಸ್ತಿದ್ಯಲ್ಲಾ ಗಸಗಸೆ ಪಾಯ್ಸ. ಅದನ್ನು ಕುಡಿದು ಮತ್ತೇರಿದ್ದಾಗ್ಲೆ ಮಲಗಿಬಿಡೋವ್ರು, ಜ್ಞಾಪಕ ಇದ್ಯಾ ಅಜ್ಜಿ?’

‘ಇಲ್ದೇ ಏನು. ಕುಂಭಕರ್ಣರ ಹಾಗೆ ಹಜಾರದಲ್ಲಿ ಹಾಗೆ ಬಿದ್ಕೊಂಡು ಒಬ್ರಿಗಿಂತ ಒಬ್ರು ಜೋರಾಗಿ ಗೊರಕೆ ಹೊಡೀತ ಮಲಗೋವ್ರು.’

‘ಮಲಗ್ದೆ ಇನ್ನೇನ್ ಮಾಡ್ತಾರಜ್ಜಿ! ನಿನ್ನ ಗಸಗಸೆ ಪಾಯ್ಸದಲ್ಲಿ ಅಫೀಮು ಇರೋದು. ಕುಡಿದ ತಕ್ಷಣ ಅವ್ರಿಗೆ ಮತ್ತೇರೋದು. ಗಸಗಸೆ ಎಲೇನೇ ಒಣಗ್ಸಿ ಪುಡಿ ಮಾಡಿ, ಅದನ್ನು ಸಿಗರೇಟು ತರಹ ಸೇದೋವ್ರು ಹಿಪ್ಪಿಗಳು! ಅವ್ರೂ ನಿನ್ನ ಪುರೋಹಿತ್ರ ಹಾಗೇ ಔಟಾಗೋವ್ರು!’

‘ಥೂ ಮುಂಡೇದೆ! ಒಟ್ನಲ್ಲಿ ನಾನು ಹೇಳೋದು ಮ್ಯಾಗಿ ತಿಂದು ಯಾಕೆ ಚಿಕ್ ವಯಸ್ನಲ್ಲೇ ನಮ್ ಹುಡುಗ್ರ ಆರೋಗ್ಯ ಹಾಳಾಗ್ಬೇಕು? ನಮ್ಮ ಶ್ಯಾವಿಗೆ ಯಾವುದಕ್ಕೆ ಕಡಿಮೆ? ಅದಕ್ಕೆ ನಮ್ಮಲ್ಲಿ ಎಷ್ಟು ತರಹ ಒಗ್ಗರಣೆಗಳಿವೆ! ಅದಕ್ಕೆ ತುಪ್ಪ ಸೇರ್ಸಿ ಬೆರಸ್ಕೊಂಡು ಸಂಡಿಗೆ ಕರ್ದು ತಿಂದ್ರೆ ಹ್ಯಾಗಿರುತ್ತೋ?’

‘ಫಸ್ಟ್ ಕ್ಲಾಸಾಗಿರುತ್ತೆ! ಅಜ್ಜಿ ಇನ್ನು ಮ್ಯಾಗಿ ಡಿಸ್ಕಶನ್ ಸಾಕು! ರಾತ್ರಿ ನೀನು ವಾಂಗೀಭಾತ್ ಮಾಡ್ಬಿಡು. ನಾನು ನಿನಗೆ ‘ಸತ್ಯವಾನ್ ಸಾವಿತ್ರಿ’ ಪಿಕ್ಚರ್ ವೀಡಿಯೋನ ರೆಡಿ ಮಾಡ್ತೀನಿ.’

‘ಇದೊಪ್ಕೋತೀನಿ!’

‘ಹಾಗೆ ಸ್ವಲ್ಪ ಕೇಸರೀಭಾತ್ ಮಾಡ್ಬಿಡು. ಹ್ಯಾಗಿದ್ರೂ ಇವತ್ತು ದ್ವಾದಶಿ. ಅದಾದ್ಮೇಲೆ ಯುಟ್ಯೂಬ್ನಲ್ಲಿ ನಿನ್ನ ಫೇವ್ರೇಟ್ ಚಿತ್ರ ಪಂತುಲು ಅವ್ರ ‘ಸ್ಕೂಲ್ ಮಾಸ್ಟರ್’ ಒಟ್ಗೆ ನೋಡೋಣ.’

‘ಥೂ ಮುಂಡೆದೆ! ಎಲ್ಲಾದಕ್ಕು ಬೆಣ್ಣೆ ಹಚ್ತೀಯ! ಆಗ್ಲಿ!’





# ಯಾ ದಿಕ್ಕಿಗೆ ಕಮೋಡ್ ಮಾಡಿ?

**- ಪ್ರಶಾಂತ ಆಡೂರ**

**ನಾ** ಒಂದ ಮನಿ ಕಟ್ಟಲಿಕತ್ತೇನಿ ಹುಬ್ಬಳ್ಳಿ ಒಳಗ, ಅದೇನೊ ಅಂತಾರಲಾ ಮನಿ ಕಟ್ಟಿ ನೋಡ, ಮದುವಿ ಮಾಡ್ಕೊಂಡ ನೋಡ ಅಂತ ಹಂಗ ಮದುವಿ ಮಾಡ್ಕೊಂಡಂತೂ ನೋಡಿದೆ, ಅದರ ಹಣೆಬರಹ ನಿಮಗೆಲ್ಲಾ ಗೊತ್ತಿದ್ದದ್ದ ಅದ. ಇನ್ನ ಮನಿ ಕಟ್ಟೋದ ಒಂದ ಬಾಕಿ ಇತ್ತ. ಅದನ್ನು ಹೆಂಡ್ತಿ ಕಾಟಕ್ಕ ಚಾಲು ಮಾಡಿ ದೀಡ ವರ್ಷ ಆಗಲಿಕ್ಕೆ ಬಂತ. ಹಂಗ ಅದ ಮುಗಿಲಿಕ್ಕೆ ಇನ್ನೂ ಒಂದ ವರ್ಷ ಬೇಕ ಆ ಮಾತ ಬ್ಯಾರೆ.

ನನ್ನ ಹೆಂಡ್ತಿ ರ್ರಿ, ಅವರ ಮನಿ ಕಟ್ಟಿದರು, ಇವರ ಅಪಾರ್ಟಮೆಂಟ್ ತೊಗೊಂಡರು, ನಾವ ಯಾವಾಗ ಕಟ್ಟೋದು ಅಂತ ಜೀವಾ ತಿಂದ ತಿಂದ ಇಟ್ಟಳು, ನಾ ಹುಚ್ಚರಂಗ ಅಕಿ ಮಾತ ಕೇಳಿ ಹರಪಿಲೇ ಅರ್ಧಾ ಮನಿ ಕಟ್ಟಿ ಈಗ ನಿಮ್ಮಪ್ಪನ ಕಡೆ ಸ್ವಲ್ಪ ಹೆಲ್ಪ್ ಕೇಳ ಅಂದರ ನಿಮ್ಮ ಕಡೆ ಕ್ಯಾಪಿಸಿಟಿ ಇದ್ದರ ಕಟ್ಟಬೇಕಿತ್ತ, ನಮ್ಮಪ್ಪನ ಕಡೆ ರೊಕ್ಕ ತೊಗೊಂಡ ಕಟ್ಟೋದಿದ್ದರೆ ನೀವೇನ ತಲಿ ಕಟ್ಟಿದಂಗ ಆತು ಅಂತಾಳ.

ಅದೇನೊ ಅಂತಾರಲಾ ಹೆಂಡ್ತಿ ಮಾತ ಕೇಳಿ ಮೈತುಂಬ ಸಾಲ ಮಾಡಿ ಮನಿ ಕಟ್ಟಿ ಪಾಪ ಹಳ್ಳಾ ಹಿಡದಾ ಅಂತ. ಆ ಪರಿಸ್ಥಿತಿ ನಂದು ಆಗೇದ ಈಗ. ಅದರಾಗ ನಾ ಮನಿ ಕಟ್ಟಲಿಕ್ಕೆ ಹತ್ತೇನಿ ಅನ್ನೋದ ತಡಾ ಹಂಗ ಕಟ್ಟ, ಹಿಂಗ ಕಟ್ಟ, ವಾಸ್ತು ನೋಡ, ಉತ್ತರಕ್ಕ ಬಾಗಲಾ ಮಾಡ, ಈಶಾನ್ಯ ದಿಕ್ಕಿನಾಗ ಸೆಪ್ಟಿಕ್ ಟ್ಯಾಂಕ್ ಕಟ್ಟ, ಆಗ್ನೇಯ ದಿಕ್ಕಿನಾಗ ಸಿಂಟೆಕ್ಸ್ ಇಡ, ಕಮೋಡ್ ಯಾ ದಿಕ್ಕಿನಾಗ ಮಾಡಿ ಅಂತ ಮಂದಿ ಪುಕ್ಕಟ ಸಜೆಶನ್ ಕೊಡಲಿಕತ್ತರು. ಹಂಗ ನಾ ವಾಸ್ತು-ಗಿಸ್ತು ನಂಬಂಗಿಲ್ಲಾ. ಅದರಾಗ ಲಗ್ನ ಆದಾಗಿಂದ ನನ್ನ ವಾಸ್ತು ಹಳ್ಳಾ ಹಿಡದದ ಅಂತ ನಂಗ ಹೆಂಗ ಬೇಕ ಹಂಗ ನಾ ಮನಿ ಕಟಗೊಳಿಕತ್ತೇನಿ. ಮೊನ್ನೆ ಹಿಂಗ ಈ ಮನಿ ಕಟ್ಟೋದರ ಬಗ್ಗೆ, ವಾಸ್ತು ಬಗ್ಗೆ ಡಿಸ್ಕಶನ್ ನಡೆದಾಗ ಒಬ್ಬ ದೋಸ್ತ ಏ, ನಾನೂ ಏನ ವಾಸ್ತು ನಂಬಂಗಿಲ್ಲಾ, ನಾ ದಕ್ಷಿಣ ದಿಕ್ಕಿಗೆ ಬಾಗಲ ಇದ್ದ ಮನ್ಯಾಗ ಎಂಟ ವರ್ಷ ಬಾಡಗಿ ಇದ್ದೆ ನಂಗ ಏನೇನ ಆಗಲಿಲ್ಲಾ, ಹಂಗ ಖರೇ ಹೇಳ್ಬೇಕಂದರ ನನ್ನ ಮದುವಿ ಆಗಿದ್ದ ಆ ಮನಿಗೆ ಹೋದ ಮ್ಯಾಲೆ ಅಂದಾ.

ಅಲ್ಲಾ ಅವಂಗ ಕನ್ಯಾ ಸಿಗಲಾರದ ಭಾಳ ತ್ರಾಸ ಆಗಿ ಭಾಳ ಗುದ್ಯಾಡಿ ಮದುವಿ ಆಗಿದ್ದ. ನಮಗೆಲ್ಲಾ ಮೊದ್ಲ ಗೊತ್ತಿತ್ತ, ನಾ ಸುಮ್ಮನ ಕೊಡಬೇಕೋ ಬ್ಯಾಡೊ ಅಂವಂಗ ಒಮ್ಮಿಕ್ಕಲೇ ‘ಲೇ, ದನಾ ಕಾಯೋನ, ದಕ್ಷಿಣ ದಿಕ್ಕಿಗೆ ಬಾಗಲ ಇದ್ದ ಮನ್ಯಾಗ ಇದ್ದ ನಂಗೇನೂ ಕೆಟ್ಟ ಆಗಿಲ್ಲಾ ಅಂತಿ, ಮ್ಯಾಲೆ ಆ ಮನಿಗೆ ಹೋದ ಮ್ಯಾಲೆ ಮದ್ವಿ ಆದಿ ಅಂತಿ, ಲೇ ಮದ್ವಿಕಿಂತಾ ಕೆಟ್ಟ

ಮತ್ತೇನ ಆಗ್ಬೇಕಪಾ ಗಂಡಸರಿಗೆ? ಅದಕ್ಕ ಹೇಳೋದ ಸೌಥ್ ಫೇಸಿಂಗ್ ಬಾಗಲ ಇರಬಾರದು ಅಂತ' ಅಂತ ನಾ ಅವಂಗ ಚಾಷ್ಟಿ ಮಾಡಿದೆ.

ಅಂವಂಗ ನಾ ಹೇಳಿದ್ದ ಖರೇ ಅನಸ್ತ. ಪಾಪ ಈಗ ಪಶ್ಚಿಮ ದಿಕ್ಕಿಗೆ ಬಾಗಲ ಇದ್ದದ್ದ ಮನಿ ಹುಡಕಲಿಕತ್ತಾನ. ಅಲ್ಲಾ, ಇನ್ನೇನ ಯಾ ದಿಕ್ಕಿಗೆ ಬಾಗಲ ಇದ್ದರೇನು ಬಿಟ್ಟರೇನ ಬಿಡ್ರಿ, ಲಗ್ನ ಮಾಡ್ಕೊಂಡು ಅನುಭವಿಸಲಿಕತ್ತ ಮ್ಯಾಲೆ. ಈಗ ಪಶ್ಚಿಮ ದಿಕ್ಕಿಗೆ ಬಾಗಲ ಇದ್ದದ್ದ ಮನಿ ಹಿಡದರ ಇದ್ದ ಹೆಂಡ್ತಿ ಏನ ವಾಪಸ ಹೋಗಂಗಿಲ್ಲಾ. ಅಲ್ಲಾ ಹಂಗ ಹೋಗಿ ಬಂದು ಮಾಡಲಿಕ್ಕೆ ಅದೇನ ಶನಿ ಅಲ್ಲ ಬಿಡ್ರಿ. ಆದರೂ ಮಾತ ಹೇಳಿದೆ.

ಈಗ ಅಂತೂ ಅಂವಾ ವಾಸ್ತು ನೋಡಲಾರದ ಏನು ಮಾಡಂಗಿಲ್ಲಾ ಮತ್ತ. ಮೊನ್ನೆ ಒಂದ ಮನಿ ಪಶ್ಚಿಮ ದಿಕ್ಕಿಗೆ ಬಾಗಲ ಇತ್ತ ಅದರ ಬಚ್ಚಲದಾಗ WOC ರಾಂಗ್ ಡೈರೆಕ್ಷನ್ ಒಳಗ ಅದ ಅಂತ ಈಡಿ ಮನಿ ರಿಜೆಕ್ಟ್ ಮಾಡಿದಾ. ಅದರಾಗ ಅವನ ಕಾಕಾ ಒಬ್ಬೊಂವ ತಪ್ಪ ದಿಕ್ಕಿನಾಗ ಬಾಥರೂಮ್ ಮಾಡಿಸಿಸಿ ಮುಂದ ಬಾಥರೂಮ್ನಾಗ ಜೀವಾ ಬಿಟ್ಟಿದ್ದನಂತ. ಹಿಂಗಾಗಿ ಅಂವಾ ಬೆಡ್‌ರೂಮ್ ವಾಸ್ತು ಪ್ರಕಾರ ಇರದಿದ್ದರೂ ಅಡ್ಡಿಯಿಲ್ಲಾ ಬಾಥರೂಮ್ ಮಾತ್ರ ವಾಸ್ತು ಪ್ರಕಾರ ಬೇಕ ಅಂತ ಗಂಟ ಬಿದ್ದಾನ. ಏನ್ಮಾಡ್ತೀರಿ?

ನಾನ ಅವಂಗ ಲೇ, ನಾ ಹೊಸಾ ಮನಿಗೆ ನಾಲ್ಕು ದಿಕ್ಕಿನಾಗ ಬಾಗಲ ಮಾಡಿಸಲಿಕತ್ತೇನಿ, ಯಾ ದಿಕ್ಕ ಒಳಗ ಹೆಂಡತಿ ಇರಂಗಿಲ್ಲಾ ಆ ದಿಕ್ಕಿನಾಗಿಂದ ಮನಿಗೆ ಎಂಟರ್ ಆಗ್ತೇನಿ, ಅದ ನಮ್ಮಂಥಾ ಗಂಡಂದರಿಗೆ ರೈಟ್ ದಿಕ್ಕ. ವಾಸ್ತು-ಗಿಸ್ತು ಬಾಳ ತಲಿಕೆಡಸಿಗೋ ಬ್ಯಾಡ ನಡಿ ಅಂತ ತಿಳಿಸಿ ಹೇಳಿ ಕಳಿಸಿದೆ. ಇವತ್ತ ಕಿಚನ್ ವಾಸ್ತು, ಬೆಡ್‌ರೂಮ್ ವಾಸ್ತು, ಮೆಟ್ಟಲಕ್ಕ ವಾಸ್ತು, ದೇವರ ಮನಿಗೆ ವಾಸ್ತು... ಮನಿ ಒಳಗ ಹಿಂತಾದಕ್ಕ ವಾಸ್ತು ಇಲ್ಲಾಂತ ಇಲ್ಲಾ. ಅಲ್ಲಾ ಮದುವಿ ಮಾಡ್ಕೊಂಡ ಮ್ಯಾಲೆ ಯಾವದ ಯಾವ ದಿಕ್ಕಿನಾಗ ಇದ್ದರೇನರಿ. ಹಂಗ ಲಗ್ನಕ್ಕಿಂತಾ ಮುಂಚೆ ಹೆಂಡ್ತಿದ ವಾಸ್ತು ಯಾರರ ಹೇಳೋರ ಇದ್ದರ ಹೇಳ್ರೀ? ಹಂಗೇನರ ಸಾಧ್ಯ ಅದ ಏನ್? ಇಲ್ಲ ಹೌದಲ್ಲ,

ಹಂಗ ಸುಮ್ಮನ ನಮ್ಮ ಅನಕೂಲ ತಕ್ಕ ಒಂದ ಮನಿ ಕಟಗೊಂಡ ಇರೋದರಿಪಾ, ಭೂಮಿನ ರೌಂಡ್ ಅದ ಹಂತಾದರಾಗ ಮತ್ತ ಆ ದಿಕ್ಕ ಈ ದಿಕ್ಕ ಅಂತ ದಿಕ್ಕ ತಪ್ಪಿಸಿಗೊಂಡ ಕೂಡೋದರಾಗ ಏನದ ಅಂತೇನಿ? ಅಲ್ಲಾ ಇದ ನನಗ ಅನಸಿದ್ದ ಮತ್ತ? ಹಂಗ ನಿಮಗ ವಾಸ್ತು ಮ್ಯಾಲೆ ನಂಬಿಕಿ ಇದ್ದರ ನೀವ ಯಾವದರ ದಿಕ್ಕಿಗೆ ಕಮೋಡ್ ಮಾಡ್ಕೋರಿ.

## ಪದಬಂಧದ ಉತ್ತರ

**ಎಡದಿಂದ ಬಲಕ್ಕೆ**

1. ಉದಕ 3. ಕನಸು 4. ಮಡಕೆ 6. ಕುಶಲ 7. ವಾಡಿಕೆ 9. ಮರುಕ 11. ನಜರು 13. ದಿವಾನ 15. ಪ್ರವಾದಿ 17. ಲಫಂಗ 18 ವರ್ತಕ 19. ತಿವಸ

**ಮೇಲಿಂದ ಕೆಳಕ್ಕೆ**

1. ಉಸುಕು 2. ಕಮಲ 3. ಕರಡಿ 5. ಕೆಸರು 7. ವಾಮನ 8. ಕೆನ್ನೀರು 9. ಮಸೀದಿ 10. ಕದನ 12. ಜಟಿಲ 14. ವಾಚಕ 15. ಪ್ರಗತಿ 16. ದಿವಸ